ಜೂನ್ ೩೬ರ ಸಂಜೆ ಶ್ರೀಮತಿ ಮಹದೇವಿ ಬಾಲುಗೌಡ (೩೨) ಮತ್ತು ಆಕೆಯ ಮಗ ವೆಂಕಟರಾಮು ಬಾಲುಗೌಡ (೧೦) ಅವರು ನೀರಿನ ಪಾಲಾಗಿದ್ದಾರೆ.

ಆದ್ದರಿಂದ ಸದರಿ ಸಂತ್ರಸ್ಥರಿಗೆ ಸರ್ಕಾರದಿಂದ ಪರಿಹಾರ ಧನವನ್ನು ಒದಗಿಸುವರೇ ಎಂದು ಸರ್ಕಾರವನ್ನು ಕೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಇದು ಸನ್ಮಾನ್ಯ ಕಂದಾಯ ಮಂತ್ರಿಗಳಿಗೆ ಸಂಬಂಧಪಟ್ಟಿರ ತಕ್ಕಂತಹ ಪ್ರಶ್ನೆ. ಇದನ್ನು ಅವರ ಗಮನಕ್ಕೆ ತಂದು ಸಮರ್ಪಕವಾದ ಕಾರ್ಯಕ್ರಮವನ್ನು ನಾವು ಕೈಗೊಳ್ಳುತ್ತೇವೆ.

ವಿತ್ತೀಯ ಕಾರ್ಯಕಲಾಪಗಳು

೧೯೯೦–೯೧ನೇ ಸಾಲಿನ ಆನಂದಾನ ಬೇಡಿಕೆಗಳ ಮೇಲಿನ ಚರ್ಚೆ

(ಲೋಕೋಪಯೋಗಿ ಮತ್ತು ಸಣ್ಣ ನೀರಾವರಿ)

ಶ್ರೀ ಜಿ. ಪುಟ್ಟಸ್ವಾಮಿಗೌಡ (ಮಾನ್ಯ ಲೋಕೋಪಯೋಗಿ ಸಚಿವರು).—ಸನ್ಮಾನ್ಯ ಅಧ್ಯಕ್ಷರೇ,

ಅಭಿಯಾಚನೆ ಕ್ರಮಾಂಕ ೩೫–ಸಣ್ಣ ನೀರಾವರಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೯೧ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಣ್ಣ ನೀರಾವರಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಪಹಿಸಲು ಸರ್ಕಾರಕ್ಕೆ, ರಾಜಸ್ವ ಖಾತೆಯಲ್ಲಿ ೩೯,೫೫,೨೨,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೭,೨೬,೩೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೩೬–ನೀರಾವರಿ, ಜಲಸಂಚಾರ, ಒಳಚರಂಡಿ ಮತ್ತು ಪ್ರವಾಹ ನಿಯಂತ್ರಣ ಯೋಜನೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೯೧ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನೀರಾವರಿ, ಜಲಸಂಚಾರ, ಒಳಚರಂಡಿ ವ್ಯವಸ್ಥೆ ಮತ್ತು ಪ್ರವಾಹ ನಿಯಂತ್ರಣ ಯೋಜನೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಪಹಿಸಲು ಸರ್ಕಾರಕ್ಕೆ, ರಾಜಸ್ವ ಖಾತೆಯಲ್ಲಿ ೨೦೯,೬೫,೦೭೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೬೫,೯೫,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೪೫–ಲೋಕೋಪಯೋಗಿ ಕಾಮಗಾರಿ ನಿರ್ಮಾಣ ಹೊರತು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೯೧ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಲೋಕೋಪಯೋಗಿ ಕಾಮಗಾರಿಗಳ (ನಿರ್ಮಾಣ ಭಿನ್ನ) ಕಾರ್ಯವು ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಪಹಿಸಲು ಸರ್ಕಾರಕ್ಕೆ, ರಾಜಸ್ವ ಖಾತೆಯಲ್ಲಿ ೮೫,೦೭,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೮೫,೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಾಡುವುದು.

ಅಭಿಯಾಚನೆ ಕ್ರಮಾಂಕ ೪೬–ಕಟ್ಟಡಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೯೧ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕಟ್ಟಡಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಪಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆ

ಯಲ್ಲಿ ೬,೫೧ ೫೩,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨೮,೫೧,೭೮,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು ಮತ್ತು

ಅಭಿಯಾಚನೆ ಕ್ರಮಾಂಕ ೪೭-ರಸ್ತೆಗಳು ಮತ್ತು ಸೇತುವೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೧ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಸ್ತೆಗಳು ಮತ್ತು ಸೇತುವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೯೫,೮೯,೭೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೫,೫೯,೦೩,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಧ್ಯಕ್ಷರು.—ಬೇಡಿಕೆಗಳನ್ನು ಸಭೆಯ ಮುಂದೆ ಮಂಡಿಸಲಾಯಿತು. ಈಗ ಬಸವರಾಜ ಪಾಟೀಲ್ ಅಟ್ಟೂರು ಅವರು ಚರ್ಚೆ ಪ್ರಾರಂಭ ಮಾಡಬಹುದು.

† ಶ್ರೀ ಬಸವರಾಜ ಪಾಟೀಲ್ ಅಟ್ಟೂರು (ಬಸವಕಲ್ಯಾಣ):— ಸನ್ಮಾನ್ಯ ಸಭಾಧ್ಯಕ್ಷರೆ, ೧೯೯೦-೯೧ನೇ ಸಾಲಿನಾಗಿ ಮಾನ್ಯ ನೀರಾವರಿ ಇಲಾಖೆಯ ಸಚಿವರು ಮಂಡಿಸಿರತಕ್ಕ ಬೇಡಿಕೆಗಳನ್ನು ನಾನು ವಿರೋಧಿಸುತ್ತಾ ಕೆಲವು ವಿಚಾರಗಳನ್ನು ಮತ್ತು ಇರತಕ್ಕ ಕೆಲವು ನ್ಯೂನತೆಗಳನ್ನು ಸರ್ಕಾರದ ಗಮನಕ್ಕೆ ತರಲು ಇಚ್ಛಿಪಡುತ್ತೇನೆ.

ಈ ನೀರಾವರಿ ಇಲಾಖೆಯು ಎಲ್ಲಾ ಇಲಾಖೆಗಳಿಗಿಂತಲೂ ಬಹಳ ಮಹತ್ವ ಪೂರ್ಣವಾದ ಇಲಾಖೆ ಆಗಿದ್ದು ಈ ಇಲಾಖೆಯ ಮುಖಾಂತರ ನಮ್ಮ ನಾಡಿನ ರೈತಾಪಿ ಜನರಿಗೆ ಹೆಚ್ಚಿನ ಅನುಕೂಲ ಕಲ್ಪಿಸಲು ಭೂಮಿಗೆ ನೀರನ್ನು ಉಣ್ಣಿಸುವ ಕೆಲಸ ಒಂದು ಪವಿತ್ರ ಕಾರ್ಯವೆಂದು ನಾನು ಬಾವಿಸಿದ್ದೇನೆ. ಈ ಬಗ್ಗೆ ನಾನು ಕೆಲವು ವಿಚಾರಗಳನ್ನು ಹೇಳುವುದಾದರೆ ಈಗಾಗಲೇ ನಾನು ಹೇಳಿದಂತೆ ನೀರಾವರಿ ಇಲಾಖೆ ಬಹಳ ಮಹತ್ವ ಪೂರ್ಣವಾಗಿರತಕ್ಕದ್ದು. ಈ ನೀರಾವರಿ ಇಲಾಖೆಯ ಹೊಣೆಯನ್ನು ಹೊತ್ತುಕೊಂಡಿರತಕ್ಕ ಮಾನ್ಯ ಮಂತ್ರಿಗಳಲ್ಲಿ ಕಾರ್ಯದಕ್ಷತೆ ಬಹಳವಾಗಿದೆ ಎಂಬುದನ್ನು ನಾನು ಕಂಡಿದ್ದೇನೆ. ನೀರಾವರಿ ಇಲಾಖೆಯು ನಮ್ಮ ರೈತರಿಗೆ ನೀರನ್ನು ಕಾಲಕ್ಕೆ ಸರಿಯಾಗಿ ಕೊಡತಕ್ಕ ಕೆಲಸವನ್ನು ಮಾಡಿದರೆ ಅದು ದೇವರ ಕೆಲಸಕ್ಕಿಂತಲೂ ಮಹತ್ವದ ಕೆಲಸವೆಂದು ದಿ: ಕೆಂಗಲ್ ಹನುಮಂತಯ್ಯನವರು ಏನು ಹೇಳಿದ್ದಾರೆ ಅದರಂತೆ ನಡೆದುಕೊಂಡಾತೆ ಆಗುತ್ತದೆ. ಇವತ್ತು ಈ ನೀರಾವರಿ ಇಲಾಖೆಯ ಹೊಣೆಯನ್ನು ಹೊತ್ತುಕೊಂಡಿರುವ ಮಾನ್ಯ ಪುಟ್ಟಸ್ವಾಮಿ ಗೌಡರು ಇದುವರೆಗೆ ಸಾಕಷ್ಟು ಕೆಲಸವನ್ನು ಮಾಡಿದ್ದಾರೆ, ಮತ್ತು ಇನ್ನೂ ಹೆಚ್ಚಿನ ಕೆಲಸವನ್ನು ಮಾಡುವುದರ ಮೂಲಕ ಈ ನಮ್ಮ ಕರ್ನಾಟಕದ ರೈತರಿಗೆ ಹೆಚ್ಚಿನ ಅನುಕೂಲವನ್ನು ಮಾಡಿಕೊಡುತ್ತಾರೆಂದು ನಂಬಿ ಈ ಸಂದರ್ಭದಲ್ಲಿ ಒಂದೆರಡು ಮಾತನ್ನು ಹೇಳಲಿಕ್ಕೆ ಇಚ್ಛಿಪಡುತ್ತೇನೆ. ನೀರಾವರಿ ಇಲಾಖೆಯಾಗಲಿ, ಲೋಕೋಪಯೋಗಿ ಇಲಾಖೆಯಾಗಲಿ ನಮ್ಮ ದೇಶದಲ್ಲಿ. ನಮ್ಮ ರಾಜ್ಯದಲ್ಲಿ ಒಂದು ಹೊಸ ಬದಲಾವಣೆಯನ್ನು ತರತಕ್ಕ ಇಲಾಖೆಗಳಾಗಿವೆ. ಇದಕ್ಕೆ ಸಂಬಂಧಪಟ್ಟಂತೆ ನಾನು ಕೆಲವು ವಿಚಾರಗಳನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತಮ್ಮ ಮೂಲಕ ತರಬಯಸುತ್ತೇನೆ.

ಹಿಂದೆ ನಮ್ಮ ಜನತಾ ಸರ್ಕಾರ ಅಧಿಕಾರದಲ್ಲಿದ್ದಾಗ ಆ ಸಂದರ್ಭದಲ್ಲಿ ನೀರಾವರಿ ಇಲಾಖೆಯ ಮಂತ್ರಿಗಳಾಗಿದ್ದ ಮಾನ್ಯ ದೇವೇಗೌಡರು ಕೆಲವೊಂದು ಉತ್ತಮ ಕಾರ್ಯಕ್ರಮಗಳನ್ನು ರೈತರಿಗೋಸ್ಕರ ರೂಪಿಸಿಕೊಂಡಿದ್ದರು. ಅದೇನೆಂದರೆ ಕರ್ನಾಟಕ ರಾಜ್ಯದ ರಾಜಧಾನಿಯಾದ ಬೆಂಗಳೂರಿನಲ್ಲಿ ನೀರಾವರಿ ಇಲಾಖೆಯವತಿಯಿಂದ ಒಂದು ನೀರಾವರಿ ಭವನವನ್ನು ನಿರ್ಮಾಣ ಮಾಡ ಬೇಕೆಂದು ಹಿಂದಿನ ಸರ್ಕಾರದಲ್ಲಿ ೨ ಕೋಟಿ ರೂಪಾಯಿಗಳ ಸೀಡ್ ಮನಿಯನ್ನು ಕೂಡ ಬಜೆಟ್‌ನಲ್ಲಿ ಒದಗಿಸಿದ್ದರು. ಆದರೆ ಈ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಅದರ ಬಗ್ಗೆ ಏನು ಕ್ರಮ ತೆಗೆದು ಕೊಂಡಿಲ್ಲ.

ಈ ಒಂದು ಸಂದರ್ಭದಲ್ಲಿ ಒಂದು ಮಾತನ್ನು ನಾನು ಮಾನ್ಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಒಳ್ಳೆಯ ಮೇಧಾವಿಗಳಿಂದ ಇಂಜಿನಿಯರ್ ಗಳಿದ್ದಾರೆ. ಅವರು ಉತ್ತಮ ಕೆಲಸಗಳನ್ನು ಮಾಡುವವರಾಗಿದ್ದಾರೆ. ನಮ್ಮ ರಾಜ್ಯದಲ್ಲಿರತಕ್ಕ

† ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ತಂತ್ರಜ್ಞರನ್ನು ಬೇರೆ ರಾಜ್ಯಗಳ ತಂತ್ರಜ್ಞರಿಗೆ ಹೋಲಿಕೆ ಮಾಡಿದರೆ ನಮ್ಮ ತಜ್ಞರು ಬಹಳ ಮೇಧಾವಿಗಳೆಂದು ನಾನು ಹೇಳಬೇಕಾಗಿದೆ. ನಾನು ಕೆಲವು ದಿವಸಗಳ ಹಿಂದೆ ಮಹಾರಾಷ್ಟ್ರಕ್ಕೆ ಹೋಗಿದ್ದಾಗ ಅಲ್ಲಿನ ಕೆಲವು ಇಲಾಖೆಗಳಿಗೆ ಹೋಗಿ ನೋಡಿದಾಗ ನಮ್ಮ ಕರ್ನಾಟಕದ ಕೆಲವು ಇಂಜಿನಿಯರ್‌ಗಳು ಕೆಲಸ ಮಾಡುತ್ತಿದ್ದುದನ್ನು ನಾನು ಕಣ್ಣಾರೆ ಕಂಡಿದ್ದೇನೆ. ಅವರು ಬಹಳ ಮೇಧಾವಿತನದಿಂದ ಕೆಲಸ ಮಾಡುತ್ತಿದ್ದರು.

(ಬಿ. ಸ್ವಾಮಿರಾವ್‌ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಆದ್ದರಿಂದ ನಾನು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ, ನಮ್ಮಲ್ಲಿರತಕ್ಕ ತಜ್ಞ ಇಂಜಿನಿಯರ್‌ಗಳಿಂದ ಉತ್ತಮ ಕೆಲಸವನ್ನು ತೆಗೆದುಕೊಳ್ಳುವ ಪ್ರಯತ್ನ ಮಾಡಬೇಕು. ನಮ್ಮ ಕನ್ನಡ ನಾಡು ಗಂಡುಮೆಟ್ಟಿನ ನಾಡು. ನಮ್ಮ ರಾಜ್ಯದಲ್ಲಿ ಹುಟ್ಟಿದ ದಿ: ಸರ್ ಎಂ. ವಿಶ್ವೇಶ್ವರಯ್ಯನವರು ಇಡೀ ರಾಷ್ಟ್ರದ ಸುಪ್ರಸಿದ್ಧ ಇಂಜಿನಿಯರ್ ಆಗಿ ಕೆಲಸವನ್ನು ನಿರ್ವಹಿಸಿದ್ದಾರೆ. ನಮ್ಮ ನೀರಾವರಿಯನ್ನು ಅತ್ಯುನ್ನತ ಮಟ್ಟಕ್ಕೆ ಕೊಂಡೊಯ್ಯಲು ಅವಶ್ಯಕವಾದ ಇಂಜಿನಿಯರ್‌ಗಳು ಸಾಧನ ಸಲಕರಣೆಗಳಿದ್ದರೂ ಕೂಡ ಬೇರೆ ರಾಜ್ಯಗಳಿಗೆ ಹೋಲಿಕೆ ಮಾಡಿ ನೋಡಿದರೆ ನಾವು ಬಹಳಷ್ಟು ಹಿಂದೆ ಬಿದ್ದಿದ್ದೇವೆಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ನಮ್ಮಲ್ಲಿ ಬಹಳ ಕಡಿಮೆ ಪ್ರದೇಶಕ್ಕೆ ನೀರಾವರಿಯನ್ನು ಕೊಡುತ್ತಿದ್ದೇವೆ. ಇದಕ್ಕೆ ಕಾರಣ ನೀರಾವರಿ ಇಲಾಖೆಗೆ ಸಾಕಷ್ಟು ಪ್ರಮಾಣದಲ್ಲಿ ಹಣವನ್ನು ಒದಗಿಸುತ್ತಿಲ್ಲದಿರುವುದು. ಇದರಿಂದಾಗಿ ಇಲಾಖೆಯ ತಜ್ಞರು ಸರಿಯಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಭೂಮಿಯನ್ನು ಕಳೆದುಕೊಂಡಿರುವವರಿಗೆ ಪರಿಹಾರವನ್ನು ಸರಿಯಾಗಿ ಕೊಡುತ್ತಿಲ್ಲ. ಈ ಕಾರಣದಿಂದಾದ ರಾಜ್ಯದ ಜನರಿಗೆ ಸರಿಯಾಗಿ ರೀತಿಯಲ್ಲಿ ನೀರಾವರಿ ಸೌಲಭ್ಯವನ್ನು ಒದಗಿಸಿಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಇದು ಬಹಳ ದುರಾದೃಷ್ಟಕರವಾದ ಸಂಗತಿಯಾಗಿದೆ. ಮಾನ್ಯ ಮಂತ್ರಿಗಳು ಇದನ್ನು ಗಮನದಲ್ಲಿಟ್ಟುಕೊಂಡು ಅತಿ ಶೀಘ್ರವಾಗಿ ನಮ್ಮ ರಾಜ್ಯದ ನೀರಾವರಿ ಇಲಾಖೆಯ ಬಗ್ಗೆ ಹೆಚ್ಚಿನ ಆದ್ಯತೆಯನ್ನು ಕೊಡುವುದರ ಜೊತೆಗೆ ಹೆಚ್ಚಿನ ಹಣಕಾಸಿನ ವ್ಯವಸ್ಥೆಯನ್ನೂ ಕೂಡ ಮಾಡಿ ನಮ್ಮ ರಾಜ್ಯದ ರೈತಾಪಿ ಜನತೆಗೆ ಅನುಕೂಲ ಮಾಡಿಕೊಡತಕ್ಕಂಥದ್ದು ಅವರ ಕರ್ತವ್ಯವಾಗಿದೆ ಎಂದು ಹೇಳಬಯಸುತ್ತೇನೆ. ಈ ಸಾಲಿನ ಮುಂಗಡ ಪತ್ರದಲ್ಲಿ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಿ ನೀರಾವರಿಗೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕು ವಿತಕ್ಕೆಂದರೆ ಇವತ್ತಿನದಿವಸ ಹಲವಾರು ನ್ಯೂನ್ಯತೆಗಳನ್ನು ಈ ಇಲಾಖೆಯಲ್ಲಿ ಕಣ್ಣಾರೆ ಕಂಡಿದ್ದೇವೆ. ವಿಶೇಷವಾಗಿ ಹೇಳುವುದಾದರೆ ಇಡೀ ರಾಜ್ಯದಲ್ಲಿ ಬಹಳಷ್ಟು ದೊಡ್ಡ ಪ್ರಮಾಣದ ನೀರಾವರಿ ಯೋಜನೆಗಳನ್ನು, ಮಧ್ಯಮ ಪ್ರಮಾಣದ ನೀರಾವರಿ ಯೋಜನೆಗಳನ್ನು ಮತ್ತು ಸಣ್ಣ ಪ್ರಮಾಣದ ನೀರಾವರಿ ಯೋಜನೆಗಳನ್ನು ಕೈಗೊಂಡು ಇದನ್ನು ಮೂರು ಭಾಗಗಳಾಗಿ ವಿಂಗಡಣೆಮಾಡಿದ್ದಾರೆ. ಈ ಮೂರು ಭಾಗಗಳನ್ನಾಗಿ ಮಾಡಿದಂಥ ಕಾಲದಲ್ಲಿ ಎಷ್ಟೋ ದೊಡ್ಡ ದೊಡ್ಡ ಇಂಜಿನೀಯರಿಗಳು ಬಂದು ಹೋಗಿರುವುದರಿಂದ ಒಂದು ಮಾತನ್ನು ಈ ಸಂದರ್ಭದಲ್ಲಿ ಸ್ಪಷ್ಟಪಡಿಸುವುದೇನೆಂದರೆ, ಈ ರಾಜ್ಯದ ಈ ಇಲಾಖೆಯಲ್ಲಿ ಸರಿಯಾದ ರೀತಿಯಲ್ಲಿ ಕೆಲಸಕಾರ್ಯಗಳನ್ನು ಕೈಗೊಂಡಿದ್ದ ಪಕ್ಷದಲ್ಲಿ ಕರ್ನಾಟಕ ರಾಜ್ಯವು ಇಡೀ ಭಾರತದೇಶದಲ್ಲಿಯೇ ಮಾದರಿ ರಾಜ್ಯವಾಗುವಂಥ ಪಟ್ಟಕ್ಕೆ ತರಲು ಪ್ರಯತ್ನ ಪಡಬಹುದಾಗಿತ್ತು. ನಮ್ಮ ದೇಶದಲ್ಲಿ ನೀರಾವರಿಯಲ್ಲಿ ಮುಂದಿರುವ ಪಂಜಾಬ್ ಮತ್ತು ಹರಿಯಾಣಕ್ಕೆ ಹೋಲಿಸಿ ನೋಡಿದರೆ ನಮ್ಮ ರಾಜ್ಯ ಸಾಕಷ್ಟು ಪ್ರಮಾಣದಲ್ಲಿ ನೀರಾವರಿ ಸೌಲಭ್ಯವನ್ನು ಹೊಂದಲು ಫಲವತ್ತಾದ ಭೂಮಿಯ ಅನುಕೂಲತೆಯನ್ನು ಹೊಂದಿರುತ್ತದೆ. ಆದ್ದರಿಂದ ಹೆಚ್ಚಿನ ರೀತಿಯಲ್ಲಿ ಸರ್ವ ಕಾರ್ಯವನ್ನು ಕೈಗೊಂಡು ಯಾವ ಯಾವ ಪ್ರದೇಶಗಳಲ್ಲಿ ನೀರಾವರಿ ಯೋಜನೆಗಳನ್ನು ತೆಗೆದುಕೊಳ್ಳಲು ಸಾಧ್ಯವಿರುತ್ತದೆ. ಆ ಪ್ರದೇಶಗಳನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಹಿಂದೆ ಇಂಥ ಒಂದು ಕಾರ್ಯವನ್ನು ಮಾಡಿದ್ದರೂ ಮುಂದೆಕ್ಕಾದರೂ ಇಂಥ ಒಂದು ಕಾರ್ಯವನ್ನು ಸರ್ಕಾರದವರು ಕೈಗೊಳ್ಳಬೇಕೆಂದು ಹೇಳುತ್ತೇನೆ. ನೀರಾವರಿ ಇಲಾಖೆ ಮುಖ್ಯವಾಗಿ ಕೆರೆ ಕಾಂಟಿಗಳ ಕಾಮಗಾರಿ ಕೆಲಸಗಳನ್ನು ತೆಗೆದುಕೊಂಡು ರೈತಾಪಿ ಜನರಿಗೆ ನೀರಾವರಿಯನ್ನು ಒದಗಿಸಿದರೆ ಅವರಿಗೆ ಒಂದು ರೀತಿಯ ಪರಿಹಾರವನ್ನು ಕೊಟ್ಟಂತಾಗುತ್ತದೆಂದು ಮಾನ್ಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ಮಾನ್ಯ ಸಚಿವರು ಇಡೀ ನಮ್ಮ ಕರ್ನಾಟಕ ರಾಜ್ಯದಲ್ಲಿಲ್ಲ ಕೇವಲ ಒಂದು ಭಾಗವನ್ನಷ್ಟೇ ಗಮನದಲ್ಲಿಟ್ಟುಕೊಳ್ಳುವುದು ಸರಿಯಾದುದಲ್ಲ. ಅನೇಕ ಸಂದರ್ಭಗಳಲ್ಲಿ ಈ ವಿಚಾರವನ್ನು ಈ ಸದನದಲ್ಲಿ ಪ್ರಸಾಪ ಮಾಡಿರುತ್ತೇವೆ. ಉತ್ತರ ಕರ್ನಾಟಕಕ್ಕೆ ಕಡಿಮೆ ಪ್ರಮಾಣದಲ್ಲಿ ಹಣವನ್ನು ಒದಗಿಸಿ ದಕ್ಷಿಣ ಕರ್ನಾಟಕಕ್ಕೆ ಅಂದರೆ ಹಳೇ ಮೈಸೂರು ಭಾಗಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಹಣವನ್ನು ಒದಗಿಸುತ್ತಿರುವುದನ್ನು ಕಣ್ಣಾರೆ ಕಂಡಿದ್ದೇವೆ. ಇಂಥ ಒಂದು ದೃಷ್ಟಿಯನ್ನಿಟ್ಟುಕೊಂಡು ಇಲಾಖೆಯಲ್ಲಿ ಕೆಲಸ ಮಾಡುವುದಾದರೆ ಇಡೀ ಕರ್ನಾಟಕ ರಾಜ್ಯವು

ಮುಂದುವರಿಯಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಯಾವ ಭಾಗ ನೀರಾವರಿಯಲ್ಲಿ ಬಹಳ ಹಿಂದುಳಿದ ಭಾಗವಾಗಿರುತ್ತದೆಯೋ ಅದಕ್ಕೆ ಹೆಚ್ಚಿನ ಪೂಣದಲ್ಲಿ ಹಣವನ್ನು ಒದಗಿಸುವುದು ಸರ್ಕಾರದ ಕರ್ತವ್ಯವಾಗಿರುತ್ತದೆ. ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಕಾವೇರಿ ನದಿ ಯೋಜನೆಗಳಿಗೆ ಯಾವ ಪ್ರಮಾಣದಲ್ಲಿ ಆದ್ಯತೆಯನ್ನು ಕೊಟ್ಟು ಕೆಲಸಕಾರ್ಯಗಳನ್ನು ನಿರ್ವಹಿಸುತ್ತಿದ್ದಾರೋ ಅದೇ ಪ್ರಮಾಣದಲ್ಲಿ ಅದೇ ದೃಷ್ಟಿಕೋನವನ್ನಿಟ್ಟುಕೊಂಡು ಕೃಷ್ಣಾನದಿ ನೀರಾವರಿ ಯೋಜನೆಗಳನ್ನು ಕೈಗೊಳ್ಳಲು ಹೆಚ್ಚಿನ ಹಣವನ್ನು ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

ನಮ್ಮ ಭಾಗದಲ್ಲಿ ಕಳೆದಬಾರಿ ಮಾನ್ಯ ಸಚಿವರು ಪ್ರವಾಸ ಬಂದಂಥಕಾಲದಲ್ಲಿ ಹೆಚ್ಚಿನ ಮಳೆಯಿಂದಾಗಿ ಹಾನಿಗೀಡಾದ ಬೀದರ್ ಗುಲ್ಬರ್ಗಾ ರಸ್ತೆಗಾರಿಗೆ ಸಂಪರ್ಕಗಳನ್ನು ನೋಡಿಕೊಂಡು ಬಂದಿರುತ್ತಾರೆ. ಹಾನಿಗೊಳಗಾದ ರಸ್ತೆ ದುರಸ್ತಿ ಕಾರ್ಯವನ್ನೂ ಕೂಡ ಕೈಗೊಳ್ಳಲು ಮಾನ್ಯ ಸಚಿವರು ತಮ್ಮ ಗಮನಿಸಬೇಕೆಂದು ಕೇಳಿಕೊಳ್ಳುತ್ತಾ ನಮ್ಮ ಭಾಗದ ಹಿಂದುಳಿದ ಪ್ರದೇಶಗಳಿಗೆ ನೀರಾವರಿಗೆ ಆದ್ಯತೆಯನ್ನು ಕೊಟ್ಟು ಹೆಚ್ಚಿನ ಹಣವನ್ನು ಒದಗಿಸಲು ವ್ಯವಸ್ಥೆಯನ್ನು ಮಾಡ ಬೇಕೆಂದು ಹೇಳಬಯಸುತ್ತೇನೆ. ಈಗಾಗಲೇ ಕರ್ನಾಟಕ ರಾಜ್ಯ ಬೃಹತ್ ಪ್ರಮಾಣದಲ್ಲಿ ಸಾಕಷ್ಟು ನೀರಾವರಿ ಯೋಜನೆಗಳನ್ನು ಕೈಗೊಂಡು ಮಾಡುತ್ತಿರತಕ್ಕಂಥ ಸಂದರ್ಭದಲ್ಲಿ ಮಹಾರಾಷ್ಟ್ರದಲ್ಲಿ ಯಾವ ರೀತಿ ನೀರಾವರಿ ಪದ್ಧತಿಯನ್ನು ಕೈಗೊಂಡಿರುತ್ತಾರೋ ಅದೇ ರೀತಿಯಲ್ಲಿ ಇಲ್ಲಿಯೂ ಕೂಡ ಆ ಪದ್ಧತಿಯನ್ನು ಅನುಸರಿಸಬೇಕೆಂದು ಹೇಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ;— ಮಾನ್ಯ ಅಧ್ಯಕ್ಷರೇ, ನೀರಾವರಿ ಇಲಾಖೆ ಮತ್ತು ಲೋಕೋಪಯೋಗಿ ಇಲಾಖೆ ಬಹಳ ಮುಖ್ಯವಾದ ಇಲಾಖೆಗಳು. ಇಲಾಖೆಯ ಬೇಡಿಕೆಗಳ ಮೇಲೆ ಚರ್ಚೆಯಾಗುತ್ತಿರತಕ್ಕಂಥ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳು ಕುಳಿತಿರುವುದು ನಮ್ಮ ಸುದೈವ. ಆದರೆ ಅಧಿಕಾರಿಗಳ ಗ್ಯಾಲರಿಯಲ್ಲಿ ಒಬ್ಬರೂ ಅಧಿಕಾರಿಗಳು ಕಾಣುತ್ತಿಲ್ಲ. ಏತಕ್ಕೆಂದು ಅರ್ಥವಾಗುತ್ತಿಲ್ಲ. ಬಹಳ ತೀವ್ರವಾಗಿ ಈ ಸದನ ವಿಚಾರವನ್ನು ಗಣನೆಗೆ ತೆಗೆದುಕೊಳ್ಳಬೇಕಾಗಿದೆ. ಏತಕ್ಕೆಂದರೆ ಸದಸ್ಯರಲ್ಲಿ ಮಾತನಾಡತಕ್ಕಂಥ ಸಂದರ್ಭದಲ್ಲಿ ಏನು ಹೇಳುತ್ತಾರೆಂಬುದನ್ನು ತಮಗಿಂತಲೂ ಹೆಚ್ಚಾಗಿ ಅವರು ತಿಳಿದುಕೊಳ್ಳಬೇಕಾಗಿರುತ್ತದೆ. ಆದ್ದರಿಂದ ಅವರನ್ನು ದಯವಿಟ್ಟು ಕರೆಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ:— ಮಾನ್ಯ ಅಧ್ಯಕ್ಷರೇ ಮೂರನೆಯ ಮಹಡಿಯಲ್ಲಿ ನಮ್ಮ ಇಲಾಖೆಗೆ ಸಂಬಂಧಪಟ್ಟ ವಿಶಾಟಿಂಗ್ ನಡೆಯುತ್ತಿದೆ. ಚೀಫ್ ಇಂಜಿನೀಯರ್ ಮತ್ತು ಡಿಪ್ಯೂಟಿ ಸೆಕ್ರೆಟರಿ ಎಲ್ಲಾ ಅಲ್ಲಿ ಇದ್ದಾರೆ. ಇನ್ನು ಹತ್ತು ನಿಮಿಷದಲ್ಲಿ ಎಲ್ಲರೂ ಬರುತ್ತಾರೆ.

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್:—ಮಹಾರಾಷ್ಟ್ರದಲ್ಲಿ ಯಾವ ರೀತಿ ಟೈಮ್ ಬಾಂಡ್ ಪ್ರೋಗ್ರಾಮ್ ಫಿಕ್ಸ್ ಮಾಡಿ ನೀರಾವರಿ ಯೋಜನೆಗಳನ್ನು ತೀವ್ರಗತಿಯಲ್ಲಿ ತೆಗೆದುಕೊಂಡು ಮಾಡುತ್ತಿದ್ದಾರೆ, ಅದರಂತೆ ಕರ್ನಾಟಕದಲ್ಲೂ ನೀರಾವರಿ ಯೋಜನೆಗಳನ್ನು ತೆಗೆದುಕೊಂಡಲ್ಲಿ ಸಂಪೂರ್ಣವಾಗಿ ನೀರಾವರಿ ಯೋಜನೆಗಳನ್ನು ಮುಂಗಿಸಲು ಸಾಧ್ಯವಾಗುತ್ತದೆಂದು ಹೇಳುತ್ತೇನೆ.

ಗೋಳ್ಳರಿಂದ ಸಾಕಷ್ಟು ನೀರಾವರಿ ಯೋಜನೆಗಳು ನಮ್ಮ ಭಾಗದಲ್ಲಿ ಬಂದಿವೆ. ಮಾನ್ಯ ವೀರೇಂದ್ರ ಪಾಟೀಲರು ಹಿಂದೆ ಮುಖ್ಯ ಮಂತ್ರಿಗಳಾಗಿದ್ದಾಗ ನಮ್ಮ ಭಾಗದಲ್ಲಿ ಸಾಕಷ್ಟು ನೀರಾವರಿ ಯೋಜನೆಗಳನ್ನು ಹಾಕಿಕೊಟ್ಟಿದ್ದಾರೆ. ನಮ್ಮ ಭಾಗದಲ್ಲಿ ಸರ್ವೆ ಮಾಡಿಸಿ ನೀರಾವರಿಗೆ ಹೆಚ್ಚಿನ ಆದ್ಯತೆ ಕೊಡುವ ಕೆಲಸ ಮಾಡಿದ್ದಾರೆ. ಅವರು ಹಾಕಿರುವ ಕಾರ್ಯಕ್ರಮಗಳನ್ನು ಸಂಪೂರ್ಣವಾಗಿ ಮುಗಿಸಲಿಕ್ಕೆ ಇನ್ನೂ ಸಾಧ್ಯವಾಗಿಲ್ಲ. ಬಜೆಟ್ಟಿನಲ್ಲಿ ಹೆಚ್ಚಿನ ಹಣ ಕೊಡಲಾರದೆ ಸಮಯಕ್ಕೆ ಸರಿಯಾಗಿ ಯಾವ ಕೆಲಸಗಳೂ ಸರಿಯಾಗಿ ಆಗುತ್ತಿಲ್ಲ. ಆದ್ದರಿಂದ ಹಿಂದುಳಿದ ಪ್ರದೇಶದಲ್ಲಿರತಕ್ಕ ಕೆರೆಗಳು, ಸಣ್ಣ ನೀರಾವರಿ ಯೋಜನೆ, ಮಧ್ಯಮ ನೀರಾವರಿ ಯೋಜನೆ ಯಾವುದೇ ಇರಬಹುದು, ಇವೆಲ್ಲಾ ನೀರಾವರಿ ಯೋಜನೆಗಳಿಗೆ ಹೆಚ್ಚಿನ ಹಣ ಒದಗಿಸಿಕೊಡುವ ಮೂಲಕ ಆ ಭಾಗದ ನೀರಾವರಿ ಯೋಜನೆಗಳಿಗೆ ಮೊದಲ ಆದ್ಯತೆ ಕೊಡಬೇಕು. ಇದರಿಂದ ರೈತರಿಗೆ ಅನುಕೂಲವಾಗುತ್ತದೆಂದು ಈ ಸಂದರ್ಭದಲ್ಲಿ ಸ್ಪಷ್ಟವಾಗಿ ಹೇಳುವುದಕ್ಕೆ ಬಯಸುತ್ತಿದ್ದೇನೆ. ಇವತ್ತಿನ ದಿವಸ ನಾನು ಬಹಳ ಮಹತ್ವಪೂರ್ಣವಾದ ವಿಚಾರಗಳನ್ನು ಹೇಳುತ್ತಿದ್ದೇನೆ. ಕರ್ನಾಟಕ ರಾಜ್ಯದಲ್ಲಿರತಕ್ಕ ಹಲವಾರು ವಿಚಾರಗಳನ್ನು ತೆಗೆದುಕೊಳ್ಳುವುದಕ್ಕೆ ಆಗದಿದ್ದರೂ ನೀರಾವರಿ ಯೋಜನೆಗಳನ್ನಾದರೂ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ನೀರಾವರಿ ಯೋಜನೆ ಕೆಲಸಗಳಿಗೆ ಸಾಕಷ್ಟು ಹಣ ಒದಗಿಸಿ ನೀರಾವರಿ ಕೆಲಸಗಳು ವಿಳಂಬವಾಗುವುದನ್ನು ತಪ್ಪಿಸಬೇಕೆಂದು ಮಾನ್ಯ ಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತೇನೆ. ಇವತ್ತಿನ ದಿವಸ ಕೆರೆಯ ಕೆಳಗಡೆಯ ಫಲವತ್ತಾದ ಜಮೀನನ್ನು ಕಳೆದುಕೊಂಡವರಿಗೆ ಕೂಡಲೇ ಪರಿಹಾರ

ಸಿಗುತ್ತಿಲ್ಲ. ಅವರೆಲ್ಲರಿಗೆ ಕೂಡಲೇ ಮತ್ತು ಹೆಚ್ಚಿನ ಪರಿಹಾರ ಕೊಡುವ ವ್ಯವಸ್ಥೆಯನ್ನು ನೀರಾವರಿ ಇಲಾಖೆಯವರು ಮಾಡಬೇಕೆಂದು ಹೇಳಬಯಸುತ್ತೇನೆ. ಉತ್ತಮವಾದ ಜಮೀನನ್ನು ಕಳೆದುಕೊಂಡ ಕೆಲವರಿಗೆ ಪರಿಹಾರವೇ ಸಿಕ್ಕಿಲ್ಲ, ಕಾರಂಜ ನೀರಾವರಿ ಯೋಜನೆಯಿಂದ ಭೂಮಿ ಕಳೆದುಕೊಂಡವರಿಗೆ ಸಿಕ್ಕಿರುವುದು ಎಕರೆಗೆ ೩½ ಸಾವಿರ ರೂಪಾಯಿಗಳು ಮಾತ್ರ. ಅದೇ ಜಮೀನನ್ನು ಹೊರಗಡೆ ಮಾರಾಟ ಮಾಡಿದರೆ ಎಕರೆಗೆ ೨೦ ರಿಂದ ೨೫ ಸಾವಿರ ರೂಪಾಯಿಗೆ ಹೋಗುತ್ತಿತ್ತು. ಹೀಗಾಗಿ ಅನೇಕ ಜನರಿಗೆ ಅನ್ಯಾಯವಾಗಿರುವುದನ್ನು ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಹಲವಾರು ಜನರಿಗೆ ಕರೆಯಲ್ಲಿ ಕಳೆಗಡೆ ಜಮೀನು ಕಳೆದುಕೊಂಡವರಿಗೆ ಯೋಗ್ಯವಾದ ಪರಿಹಾರ ಧನ ಸಿಕ್ಕಿಲ್ಲ. ಇವೆಲ್ಲವನ್ನು ಗಮನದಲ್ಲಿಟ್ಟುಕೊಂಡು ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಸ್ಪಷ್ಟವಾಗಿ ತಿಳಿಸಬೇಕು. ಈ ಬಗ್ಗೆ ಹೊಸ ಬದಲಾವಣೆಯನ್ನು ಜಾರಿಗೆ ತರಬೇಕೆಂದು ಹೇಳುತ್ತೇನೆ. ತಾವು ನೀರಾವರಿ ಮಂತ್ರಿಗಳಾಗಿ ಹೊಸ ಬದಲಾವಣೆಯನ್ನು ಈ ಇಲಾಖೆಗೆ ತರುತ್ತೀರೆಂಬ ಭಾವನೆ ಜನರಲ್ಲಿ ಹುಟ್ಟಬೇಕು. ಈ ಇಲಾಖೆಯ ಜವಾಬ್ದಾರಿಯನ್ನು ತೆಗೆದುಕೊಂಡ ಮೇಲೆ ಸಮರ್ಥವಾಗಿ ಕೆಲಸ ಮಾಡಿದರೆ ಇಲಾಖೆಯಲ್ಲಿ ಪ್ರಗತಿ ಆಗುವುದಕ್ಕೆ ಸಾಧ್ಯ. ಆ ರೀತಿ ಕೆಲಸ ಮಾಡುವ ಪ್ರವೃತ್ತಿಯನ್ನು ಮಂತ್ರಿಗಳು ಬೆಳೆಸಿಕೊಂಡರೆ ಎಲ್ಲೆಲ್ಲಿ ತೊಂದರೆಯಾಗುತ್ತಿದೆ, ಆದಕ್ಕೆ ಕಾರಣ ಏನು ಎಂಬುದನ್ನು ಗಮನದಲ್ಲಿಟ್ಟುಕೊಂಡು ಇಲಾಖೆಗೆ ಸಂಬಂಧಪಟ್ಟ ಇಂಜಿನಿಯರ್‌ಗಳಿಗೆ, ಕಾರ್ಯದರ್ಶಿಗಳಿಗೆ ಸೂಕ್ತವಾದ ಸಲಹೆ ಕೊಟ್ಟು ಎಲ್ಲಾ ಕೆಲಸಗಳನ್ನು ತ್ವರಿತ ರೀತಿಯಲ್ಲಿ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಮಾನ್ಯ ಮಂತ್ರಿಗಳಿಗೆ ಮತ್ತು ಸರ್ಕಾರಕ್ಕೆ ಹೇಳಬಯಸುತ್ತೇನೆ. ಪರಿಹಾರ ಧನ ಕೊಡುವ ಕಾರ್ಯದಲ್ಲಿ ವಿಳಂಬವಾಗಿರುವುದು ಮತ್ತು ಸರಿಯಾದ ಪ್ರೋತ್ಸಾಹಧನ ಸಿಗದೆ ಇರುವುದನ್ನು ಗಮನದಲ್ಲಿಟ್ಟುಕೊಂಡು ಮಹಾರಾಷ್ಟ್ರ ಪದ್ಧತಿಯನ್ನು ಈ ರಾಜ್ಯದಲ್ಲಿ ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡಬೇಕೆಂದು ಒತ್ತಾಯಪೂರ್ವಕವಾಗಿ ಹೇಳಬಯಸುತ್ತೇನೆ. ನಮ್ಮ ರಾಜ್ಯದ ಬೀದರ್ ಜಿಲ್ಲೆಯ ಬಗ್ಗೆ ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ನಮ್ಮ ಬೀದರ್ ಜಿಲ್ಲೆಯಲ್ಲಿರತಕ್ಕ ಕಾರಂಜ ನೀರಾವರಿ ಯೋಜನೆ ಬಹಳ ವರ್ಷಗಳಿಂದ ಹಿಂದೆ ಬಿದ್ದಿದೆ. ಇದು ಬೀದರ್ ಜಿಲ್ಲೆಯ ಭಾಲ್ಕಿ, ಹುಮ್ನಾಬಾದ್ ಬೀದರ್ ತಾಲ್ಲೂಕಿನ ಕೆಲವು ಪ್ರದೇಶಗಳಿಗೆ ನೀರಾವರಿಯಾಗುವ ಯೋಜನೆಯಾಗಿದ್ದು, ಇದಕ್ಕೆ ಸಾಕಷ್ಟು ಹಣಕಾಸಿನ ವ್ಯವಸ್ಥೆ ಇಲ್ಲದೆ ತುಂಬಾ ತೊಂದರೆ ಅನುಭವಿಸುತ್ತಿದ್ದೇವೆ. ಒಂಬತ್ತು ಕೋಟಿ ರೂಪಾಯಿಗಳಲ್ಲಿ ಎಂದೋ, ಈ ನೀರಾವರಿ ಯೋಜನೆಯ ಕೆಲಸ ಮುಗಿಯಬೇಕಾಗಿತ್ತು. ಆದರೆ ೯೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೂ ಸಹ ಆ ಕೆಲಸ ಇನ್ನೂ ಹಾಗೆಯೇ ಉಳಿದಿರುವುದು ಶೋಚನೀಯ. ಆ ಯೋಜನೆಗೆ ಬಜೆಟ್ಟಿನಲ್ಲಿ ಎಷ್ಟು ಹಣ ಕೊಟ್ಟಿದ್ದೀರೆಂದು ಕೇಳುತ್ತೇನೆ. ಕಾರಂಜ ನೀರಾವರಿ ಯೋಜನೆಗೆ ಈ ವರ್ಷದ ಬಜೆಟ್ಟಿನಲ್ಲಿ ಸಾಕಷ್ಟು ಹಣವನ್ನು ಒದಗಿಸಿ ಆ ಯೋಜನೆಯನ್ನು ಅತಿ ಶೀಘ್ರವಾಗಿ ಮುಗಿಸಬೇಕೆಂದು ಮಾನ್ಯ ಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತೇನೆ. ಈ ವರ್ಷದ ಬಜೆಟ್ಟಿನಲ್ಲಿ ಆರೂವರೆ ಕೋಟಿ ರೂಪಾಯಿಗಳನ್ನು ವಿನಿಯೋಗ ಮಾಡಿರುವುದರಿಂದ, ಏನೂ ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಯೋಜನೆಗೆ ಯಾವುದೇ ರೀತಿಯಲ್ಲಿ ತೊಂದರೆಯಾಗದಂತೆ ಈ ಕಾರಂಜ ನೀರಾವರಿ ಯೋಜನೆ ಈ ವರ್ಷದ ಬಜೆಟ್‌ನಲ್ಲಿ ೨೫ ಕೋಟಿ ರೂಪಾಯಿಗಳ ಹಣ ಒದಗಿಸಿ ತ್ವರಿತಗತಿಯಿಂದ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡಬೇಕು ಮತ್ತು ಈ ಯೋಜನೆಗೆ ಮುಖ್ಯ ಮಂತ್ರಿಗಳು ಭೇಟಿ ಕೊಟ್ಟ ಸಂದರ್ಭದಲ್ಲಿ ಹೇಳಿರುವಂತೆ ಇದನ್ನು ಕಮ್ಯಾಂಡ್ ಡೆವಲಪ್‌ಮೆಂಟ್ ಏರಿಯಾವನ್ನಾಗಿ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತೇನೆ. ಎರಡನೆಯದಾಗಿ ಕಾರಂಜಾ ನೀರಾವರಿ ಯೋಜನೆಯಲ್ಲಿ ಆದರೆ ಉದ್ದವನ್ನು (ಫೈಟ್) ಹೆಚ್ಚು ಮಾಡುವ ಕಾರ್ಯಕ್ರಮದನ್ವಯ ಕೇಂದ್ರ ಸರ್ಕಾರದ ಮಾನ್ಯತೆ ಸಿಕ್ಕುವ ದೃಷ್ಟಿಕೋನ ಇಟ್ಟುಕೊಂಡು ಸರ್ಕಾರದವರು ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ಪ್ರಸ್ತುತ ಮೂರು ಆಡಿ ಹೆಚ್ಚಿಗೆ ಮಾಡುವ ಕಾರ್ಯಕ್ರಮದನ್ವಯ ನಮ್ಮಲ್ಲಿರುವ ರಂಜೋಳಿ ಗ್ರಾಮ ಮೋತಿ ಗ್ರಾಮ ಮತ್ತು ಇತರ ಅನೇಕ ಗ್ರಾಮಗಳು ಈ ನೀರಾವರಿ ಯೋಜನೆ ಕೆಳಗೆ ಮುಳುಗಡೆಯಾಗುವ ಸಂಭವ ಇದೆ. ಗುಲ್ಬರ್ಗ ವಲಯದ ಮುಖ್ಯ ಅಭಿಯಂತರರು ಸರ್ವೆ ಮಾಡಿ ಸರ್ಕಾರಕ್ಕೆ ಒತ್ತಾಯಪೂರ್ವಕವಾದ ಅಭಿಪ್ರಾಯವನ್ನು ಕೇಳಿದ್ದಾರೆ. ಅವರು ರಂಜೋಳಿ ಖೇಣಿಗೆ ಸೇರಿದ ಆರು ಗ್ರಾಮಗಳು ಹೋಗುತ್ತವೆ, ಉಳಿದ ಭಾಗಕ್ಕೆ ತೊಂದರೆ ಇಲ್ಲ ಎಂದು ವರದಿಯಲ್ಲಿ ತಿಳಿಸಿದ್ದಾರೆ. ಇದು ಸರಿಯಾದುದಲ್ಲ. ಈ ವರದಿಯನ್ನು ಮತ್ತೊಮ್ಮೆ ತರಿಸಿಕೊಂಡು ನೋಡಬೇಕು. ರಂಜೋಳಿ ಗ್ರಾಮ ಸಂಪೂರ್ಣವಾಗಿ ಹೋಗುತ್ತಿದೆಯೆಂಬ ವಿಷಾದನ್ನು ಸ್ಪಷ್ಟವಾಗಿ ನಾನು ಹೇಳಬಯಸುತ್ತಿದ್ದೇನೆ. ನಾನೂ ಕೂಡ ನೀರಾವರಿ ಇಲಾಖೆ ಮಂತ್ರಿಯಾಗಿ ಕೆಲಸ ಮಾಡುವಾಗ ಆ ಭಾಗಕ್ಕೆ ಭೇಟಿ ಕೊಟ್ಟು ಸ್ಪಷ್ಟವಾಗಿ ನೋಡಿದ್ದೇನೆ. ಅಲ್ಲಿರತಕ್ಕ ಜನರ ಅನಿಸಿಕೆ ಏನಿದೆ ಎಂದು ನೋಡಿದ್ದೇನೆ. ಸಂಪೂರ್ಣವಾಗಿ ಗ್ರಾಮ

ಮುಳುಗಡೆಯಾಗುವಂಥ ಪ್ರದೇಶಕ್ಕೆ ಹೋಗುವ ಸಾಧ್ಯತೆ ಇದೆ. ರಂಜೋಳಿ ಗ್ರಾಮ ಮುಳುಗಡೆಯಾಗುತ್ತಾ ಇದೆ. ಅದಕ್ಕೆ ಬೇರೆ ಕಡೆ ಸ್ಥಳಾಂತರ ಮಾಡುವಂಥ, ಪುನರ್‌ವಸತಿ ಕೆಲಸ ಮಾಡುವುದಕ್ಕೆ ಹೆಚ್ಚಿನ ಪ್ರಯತ್ನ ಪಡಬೇಕಾಗಿದೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಎರಡನೆಯದಾಗಿ ಕಮ್ಯಾಂಡ್ ಏರಿಯಾ ಡೆವಲಪ್ಮೆಂಟ್ ಕಾರ್ಯಕ್ರಮದಲ್ಲಾಗಲೀ ಈ ವರ್ಷದ ಬಜೆಟ್‌ನಲ್ಲಾಗಲೀ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಲಿ ಯೋಜನೆಯನ್ವಯವಾಗಲೀ ಅದಕ್ಕೆ ಹೆಚ್ಚಿನ ಹಣವನ್ನು ಒದಗಿಸಿಕೊಡಬೇಕೆಂದು ಹೇಳಬಯಸುತ್ತೇನೆ. ಮೂರನೆಯದಾಗಿ ನನ್ನ ಪುತ್ರಕ್ಷೇತ್ರವಾದ ಬಸವಕಲ್ಯಾಣದ ಚುಳಕಿನಾಲಾ ಯೋಜನೆ ಬಗ್ಗೆ ಈಗಾಗಲೇ ಪ್ರಾಸ್ತಾಪಿಸಿದ್ದೇನೆ. ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ಚಂದ್ರೇಗೌಡರು ಈ ವಿಚಾರವಾಗಿ ಸವಿಸ್ತಾರವಾಗಿ ಮಂತ್ರಿಗಳಿಗೆ ಹೇಳಿದ್ದಾರೆ. ಅದರ ಪ್ರಕಾರ ಚುಳಕಿನಾಲಾ ಮಧ್ಯಮ ನೀರಾವರಿ ಯೋಜನೆಯಾಗಿದ್ದು ಬಸವಕಲ್ಯಾಣ ತಾಲ್ಲೂಕಿನ ಜನರಿಗೆ ಈ ನೀರಾವರಿ ಯೋಜನೆಯಿಂದ ಹೆಚ್ಚಿನ ಅನುಕೂಲವಾಗುತ್ತದೆ. ಈ ಭೂಮಿಗೆ ನೀರಾವರಿ ಕೊಡುವ ದೃಷ್ಟಿಯಿಂದ ಈ ಭಾಗದ ಜನರಿಗೆ ಇದು ವರದಾನವಾಗಿದ್ದು, ಹಲವಾರು ವರ್ಷಗಳಿಂದ ಅದನ್ನು ಎದುರು ನೋಡುತ್ತಿದ್ದೇವೆ. ಕೇವಲ ೧೦ ಲಕ್ಷ ೨೦ ಲಕ್ಷ ದುಡ್ಡು ಕೊಟ್ಟು ಚುಳಕಿನಾಲಾ ಯೋಜನೆ ಇದುವರೆಗೂ ಪೂರ್ಣವಾಗಿ ಆಗಿಲ್ಲ. ಈ ವರ್ಷ ಬಜೆಟ್‌ನಲ್ಲಿ ಕೂಡ ಕಡಿಮೆ ಹಣ ಇಟ್ಟಿದ್ದೀರಿ. ಇದು ಮಧ್ಯಮ ನೀರಾವರಿ ಯೋಜನೆಯಾಗಿದ್ದು, ಇದನ್ನು ವರ್ಲ್ಡ್ ಬ್ಯಾಂಕ್ ಯೋಜನೆಯಾಗಿ ತೆಗೆದುಕೊಳ್ಳಬೇಕೆಂದು ಇಲಾಖೆ ಅಧಿಕಾರಿಗಳು ಸೂಚನೆ ಮಾಡಿದ್ದರು. ಆದರೆ ಕಾರಣಾಂತರದಿಂದ ವರ್ಲ್ಡ್ ಬ್ಯಾಂಕ್ ಪ್ರಾಜೆಕ್ಟ್‌ಗೆ ಸೇರಿಸುವುದಕ್ಕಾಗಲಿಲ್ಲ. ಆದ್ದರಿಂದ ಈ ವರ್ಷ ಬಜೆಟ್‌ನಲ್ಲಿ ಕೊಟ್ಟಿರುವ ಹಣ ಸಾಕಷ್ಟಿಲ್ಲ. ಆದ್ದರಿಂದ ಹೆಚ್ಚಿನ ಹಣವನ್ನು ಚುಳಕಿನಾಲಾ ಪ್ರಾಜೆಕ್ಟ್‌ಗೆ ಕೊಟ್ಟು ಅತಿ ಶೀಘ್ರವಾಗಿ ಈ ನೀರಾವರಿ ಯೋಜನೆ ಮಾಡಬೇಕೆಂದು ಹೇಳಬಯಸುತ್ತೇನೆ. ಇಲ್ಲಿ ಮುಳುಗಡೆ ಆಗುವ ಕೆಲವು ಗ್ರಾಮಗಳಿಗೆ ಹೆಚ್ಚಿನ ಪರಿಹಾರ ಧನವನ್ನು ಕೊಟ್ಟಿದ್ದೀರಿ. ಧನುರಕ್ಕೆ ಎಂದು ಒಂದು ಗ್ರಾಮವಿದ್ದು ಆ ಗ್ರಾಮದ ಜನರು ಈ ನೀರಾವರಿ ಯೋಜನೆಯಿಂದ ಪೂರ್ಣವಾಗಿ ತಮ್ಮ ಜಮೀನು ಕಳೆದುಕೊಳ್ಳಬೇಕಾಗಿದೆ. ಈ ಭಾಗದ ಜನರಿಗೇ ಹೆಚ್ಚು ತೊಂದರೆಯಾಗುವುದು. ಈ ಜನರು ಬಹಳ ಕಷ್ಟಪಡುವ ಪರಿಸ್ಥಿತಿ ಇದೆ. ಆಲ್ಲಿ ನಮ್ಮ ಇಲಾಖೆ ಅಧಿಕಾರಿಗಳು ಏನು ತಪ್ಪು ಮಾಡಿದ್ದಾರೆಂದರೆ ಕೆಲವು ಸರ್ವೆನಂಬರ್‌ನಲ್ಲಿ ಜಮೀನು ಕಳೆದುಕೊಂಡವರಿಗೆ ಪರಿಹಾರ ಕೊಟ್ಟಿದ್ದಾರೆ. ಆದರೆ ಜಮೀನು ಕಳೆದುಕೊಂಡ ಇನ್ನೂ ಎಷ್ಟೋ ಜನರಿಗೆ ಸರ್ವೆ ಮಾಡಿದನಂತರವೂ ಪರಿಹಾರಧನ ಕೊಟ್ಟಿಲ್ಲ. ಈಗಾಗಲೇ ಉತ್ತರದಲ್ಲಿ ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಅತಿ ಶೀಘ್ರವಾಗಿ ಕ್ರಮ ತೆಗೆದುಕೊಳ್ಳಬೇಕು. ಆಲ್ಲಿ ಸುಮಾರು ೬ ಗ್ರಾಮಗಳ ಜನರು ಹೆಚ್ಚಿನ ತೊಂದರೆ ಅನುಭವಿಸುತ್ತಿದ್ದಾರೆ. ಈ ಎಲ್ಲಾ ಗ್ರಾಮಗಳ ಜನರಿಗೆ ಅತಿ ಶೀಘ್ರವಾಗಿ ಪರಿಹಾರ ಧನ ಕೊಡಬೇಕೆಂದು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳ ಗಮನಕ್ಕೆ ನಾನು ತರಬಯಸುತ್ತೇನೆ. ಎರಡನೆಯದಾಗಿ ಧನುರಕ್ಕೆ ಗ್ರಾಮವನ್ನು ಪರಿವರ್ತನೆ ಮಾಡಬೇಕೆಂದು ಇಲಾಖಾಧಿಕಾರಿಗಳು ಹೇಳಿದ್ದಾರೆ. ಈ ಧನುರಕ್ಕೆ ಗ್ರಾಮ ಚುಳಕಿನಾಲಾ ಯೋಜನೆಯಡಿಯಲ್ಲಿ ಮುಳುಗಡೆಯಾಗುವ ಗ್ರಾಮವಾಗಿದ್ದು ಸದರಿ ಗ್ರಾಮದ ವಿಚಾರವಾಗಿ ಹೇಳಬೇಕಾದರೆ ಇಲ್ಲಿರುವ ಜನರು ೨೦೦–೩೦೦ ಮನೆಗಳು ಕಳೆದುಕೊಳ್ಳುವ ಪರಿಸ್ಥಿತಿ ಇದೆ. ನಾನೂ ಕೂಡ ಆ ಭಾಗದ ಶಾಸಕನಾಗಿ ಹೇಳುತ್ತಿದ್ದೇನೆ, ಆ ಭಾಗದ ಜನರ ಅಭಿಪ್ರಾಯಕ್ಕೆ ಮನ್ನಣೆ ಕೊಟ್ಟು ಆ ಧನುರಕ್ಕೆ ಗ್ರಾಮದಲ್ಲಿನ ಜನರಿಗೆ ಪುನರ್‌ವಸತಿ ಯೋಜನೆಯಡಿಯಲ್ಲಿ ಬೇರೆ ಕಡೆ ಸ್ಥಳಾಂತರಿಸಿ ಹೆಚ್ಚಿನ ಮನೆಗಳನ್ನು ಕಟ್ಟಿಸಿಕೊಡುವುದಾಗಲೀ, ಬೇರೆ ಬೇರೆ ರೀತಿಯ ಕೆಲಸಗಳಾಗಲೀ ಮಾಡಿಕೊಡಬೇಕು. ಜಮೀನು ಕಳೆದುಕೊಂಡ ಜನರಿಗೆ ಹೆಚ್ಚಿನ ಪರಿಹಾರ ಕೊಡಬೇಕೆಂದು ಹೇಳುವುದಕ್ಕೆ ಬಯಸುತ್ತಿದ್ದೇನೆ. ಈ ಚುಳಕಿನಾಲಾ ಪ್ರಾಜೆಕ್ಟ್ ಬಗ್ಗೆ, ಕಾರಂಜಾ ಪ್ರಾಜೆಕ್ಟ್ ಬಗ್ಗೆ ಸಾಕಷ್ಟು ಹೇಳಿದ್ದೇನೆ. ಇದಲ್ಲದೆ ನೀರಾವರಿ ಇಲಾಖೆಗೆ ಸಂಬಂಧಪಟ್ಟ ಇನ್ನೂ ಕೆಲವು ವಿಚಾರಗಳನ್ನು ಹೇಳಬಯಸುತ್ತೇನೆ.

೦೨.೩೦ ಪಿ.ಎಂ.

ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಪದ್ಧತಿ ಏನು ಇದೆ ನಮ್ಮ ರಾಜ್ಯದಲ್ಲಿ ಇದು ಬಹಳ ವಿಚಿತ್ರವಾದ ಪದ್ಧತಿಯಾಗಿದೆ. ಇದು ಜನರಿಗೆ ತೊಂದರೆ ಕೊಡುವ ಪದ್ಧತಿಯಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಭೂಮಿ ಸ್ವಾಧೀನಪಡಿಸಿಕೊಳ್ಳುವ ಪದ್ಧತಿ ರೈತರಿಗೆ ಶೋಷಣೆ ಮಾಡುವ ಪದ್ಧತಿಯಾಗಿದೆ. ಕೇವಲ ೨–೩ ಸಾವಿರ ರೂಪಾಯಿಗಳ ಪರಿಹಾರಧನ್ನು ಜಮೀನು ಕಳೆದುಕೊಂಡವರಿಗೆ ಕೊಟ್ಟವರಿಗೆ ಅದು ಸಾಲುವುದಿಲ್ಲ. ಹೊಸ ಮಾದರಿಯಾದ ಒಂದು ಪದ್ಧತಿಯನ್ನು ನೀವಾದರೂ ಮಾಡಿ. ಯಾರೂ ಈ ಯೋಜನೆಯನ್ವಯ ಹೆಚ್ಚು ಭೂಮಿಯನ್ನು ಕಳೆದುಕೊಂಡಿದ್ದಾರೆ. ಅಂತಹ ಜನರಿಗೆ ಹೆಚ್ಚು ಪರಿಹಾರವನ್ನು ಕೊಡಬೇಕು. ಇವನ್ನು ರೆವಿನ್ಯೂ ಡಿಪಾರ್ಟ್‌ಮೆಂಟ್‌ಗೆ

ಕಳುಹಿಸಬಾರದು. ತಮ್ಮ ಇಲಾಖೆಯಲ್ಲೇ ಆ ಜವಾಬ್ದಾರಿಯನ್ನು ತೆಗೆದುಕೊಂಡು ಎಲ್ಲರಿಗೂ ಸೂಕ್ತ ಪರಿಹಾರವನ್ನು ಕೊಡಬೇಕು. ಹೊಸದಾಗಿ ನೀರಾವರಿ ಇಲಾಖೆಯಲ್ಲೇ ಇದು ಕಾರ್ಯಗತ ಆಗಬೇಕು. ಮಹಾರಾಷ್ಟ್ರದಲ್ಲಿ ಈ ಒಂದು ಪದ್ಧತಿ ಇದೆ. ಮಾರುಕಟ್ಟೆ ಬೆಲೆ ಏನು ಇದೆ ಆ ಪ್ರಕಾರ ಸ್ವಾಧೀನಪಡಿಸಿಕೊಂಡ ಜಮೀನಿಗೂ ಕೊಡಬೇಕು. ನಮ್ಮ ರಾಜ್ಯದ ನೀರಾವರಿ ಇಲಾಖೆಯ ಅಧಿಕಾರಿಗಳಾಗಲೀ, ಅಥವಾ ಸಂಬಂಧಪಟ್ಟ ಮಂತ್ರಿಗಳಾಗಲಿ ಈ ಬಗ್ಗೆ ಕ್ರಮ ತೆಗೆದುಕೊಂಡು ಇಂತಹ ಜನರಿಗೆ ಹೆಚ್ಚಿನ ಹಣವನ್ನು ಒದಗಿಸಿಕೊಡುವ ಬಗ್ಗೆ ಕಾರ್ಯಕ್ರಮ ಹಾಕಿಕೊಳ್ಳಬೇಕು. ಮತ್ತೆ ಸಮಯಕ್ಕೆ ಸರಿಯಾಗಿ ಈ ಪರಿಹಾರ ಧನವನ್ನು ಕೊಡುವುದಿಲ್ಲ. ಆದ್ದರಿಂದ ಶಾಸನ ಸಭಾ ಸದಸ್ಯರನ್ನು ಆ ಊರಿಗೆ ಕರೆದುಕೊಂಡು ಹೋಗಿ ಆ ಶಾಸನ ಸಭಾ ಸದಸ್ಯರ ಸಮ್ಮುಖದಲ್ಲೇ ಈ ಪರಿಹಾರ ಧನವನ್ನು ಚೆಕ್ ಮೂಲಕ ಕೊಡುವಂತಹ ಕೆಲಸ ಮಾಡಿದ್ದೇ ಆದರೆ, ಜನರಲ್ಲೂ ಒಂದು ರೀತಿಯ ಒಳ್ಳೆಯ ಭಾವನೆ ಬರುತ್ತದೆ, ಪರವಾಗಿಲ್ಲ. ನಮ್ಮ ಭೂಮಿಯನ್ನು ಕಳೆದುಕೊಂಡರೂ, ಸರ್ಕಾರ ಆ ದಿಕ್ಕಿನಲ್ಲಿ ಕೆಲಸ ಮಾಡುತ್ತಿದೆ, ನಮಗೆ ಪರಿಹಾರ ಕೂಡ ಸಮಯಕ್ಕೆ ಸರಿಯಾಗಿ ಊರಿಗೆ ಬಂದು ಕೊಡುತ್ತಾರೆಂಬ ನೆಮ್ಮದಿ ಆ ಜನರಿಗೆ ಉಂಟಾಗುತ್ತದೆ. ಆದ್ದರಿಂದ ಈ ರೀತಿಯ ಕಾರ್ಯಕ್ರಮವನ್ನು ತಮ್ಮ ಇಲಾಖೆಯ ವತಿಯಿಂದ ಹಾಕಿಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ.

ಎರಡನೆಯದಾಗಿ ಅಪ್ಪರ್ ಮುಲ್ಲಾಮರಿ ಯೋಜನೆ ಬಗ್ಗೆ ಹೇಳುವುದಾದರೆ, ಇದು ನನ್ನ ಮತ ಕ್ಷೇತ್ರದಲ್ಲಿ ನಡೆಯುತ್ತಿರತಕ್ಕಂತಹ ಯೋಜನೆ. ಈ ಯೋಜನೆ ಮಿಡಿಯಂ ಇರಿಗೇಷನ್ ಪ್ರಾಜೆಕ್ಟ್ ಆಗಿದ್ದು, ಇದರಿಂದ ಬಸವಕಲ್ಯಾಣ, ಹುಮ್ನಾಬಾದ್ ಹಾಗೂ ಗುಲ್ಬರ್ಗ ಈ ಮೂರು ಭಾಗಗಳಲ್ಲಿರುತಕ್ಕ ಹೆಚ್ಚು ಭಾಗದ ಜಮೀನಿಗೆ ನೀರನ್ನು ಒದಗಿಸುವಂತಹ ಯೋಜನೆಯಾಗಿದೆ. ಹಣಕಾಸಿನ ತೊಂದರೆಯಿಂದಾಗಿ ಯಾವ ಪ್ರಮಾಣದಲ್ಲಿ ಈ ಯೋಜನೆಯ ಕಾಮಗಾರಿಗಳು ನಡೆಯಬೇಕಾಗಿತ್ತೋ ಆ ಪ್ರಕಾರ ನಡೆಯುತ್ತಿಲ್ಲ. ಆದ್ದರಿಂದ ಈ ಅಪ್ಪರ್ ಮುಲ್ಲಾಮರಿ ಯೋಜನೆಗೆ ಮಾನ್ಯ ಮಂತ್ರಿಗಳು ಹೆಚ್ಚಿನ ಆದ್ಯತೆ ಕೊಟ್ಟು ಇದೇ ವರ್ಷದಲ್ಲಿ ಆ ಯೋಜನೆಯನ್ನು ಮುಗಿಸುವಂತಹ ಕ್ರಮವನ್ನು ತೆಗೆದುಕೊಳ್ಳಬೇಕು. ಈ ಯೋಜನೆಯಿಂದ ಮುಳುಗಡೆಯಾದ ಕಿರಣಿ ಗ್ರಾಮದ ಜನರು ಒಂದೇ ಕಡೆ ಸುಮಾರಿ ಎಕರೆ ಜಮೀನನ್ನು ಕಳೆದುಕೊಂಡಿದ್ದಾರೆ. ಅವರನ್ನು ಬೇರೊಂದು ಕಡೆ ಪುನರ್ವಸತಿ ಮಾಡಲಾಗಿದೆ. ಪುನರ್‌ವಸತಿ ಮಾಡಲಾಗಿರುವ ಕಡೆ ಏತ ನೀರಾವರಿ ಯೋಜನೆಯನ್ನು ಮಾಡುವುದರಿಂದ ಆ ಜನರಿಗೆ ಹೆಚ್ಚು ಅನುಕೂಲವಾಗುತ್ತದೆಂದು ಆ ಜನರ ಬೇಡಿಕೆಯಾಗಿದೆ. ಇದು ನ್ಯಾಯಯುತವಾದುದು ಕೂಡ. ಕಿರಣಿ ಮತ್ತು ಶರಣನಗರದ ಜನರು ತಮ್ಮ ಜಮೀನನ್ನು ಕಳೆದುಕೊಂಡು ತುಂಬಾ ತೊಂದರೆಯಲ್ಲಿದ್ದಾರೆ, ಅವರಿಗಾಗಿಯೇ ಏತ ನೀರಾವರಿ ಯೋಜನೆಯನ್ನು ಮಾಡುವುದರಿಂದ ಹೆಚ್ಚು ಅನುಕೂಲವಾಗುತ್ತದೆ. ಆ ದಿಸೆಯಲ್ಲಿ ಈ ಸಾಲಿನ ಬಜೆಟ್‌ನಲ್ಲೇ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಮತ್ತು ಹೆಚ್ಚು ಹಣ ಒದಗಿಸುವುದಕ್ಕೆ ಪ್ರಯತ್ನ ಮಾಡಬೇಕು.

ಇನ್ನು ನಮ್ಮ ಭಾಗದಲ್ಲಿ ಅನೇಕ ನೀರಾವರಿ ಯೋಜನೆಗಳ ಕೆಲಸ ನಡೆಯುತ್ತಿರುವುದರಿಂದ ಗುಲ್ಬರ್ಗಾ ವಲಯ ಕಛೇರಿಯನ್ನು ಮಾಡಲಾಗಿದ್ದು, ಅದಕ್ಕಾಗಿ ಒಬ್ಬ ಮುಖ್ಯ ಇಂಜಿನೀಯರ್‌ನ್ನೂ ಕೂಡ ಹಿಂದಿನ ಸರ್ಕಾರ ಇದ್ದಾಗಲೇ ನೇಮಕ ಮಾಡಲಾಗಿದೆ. ಕಾರಣ ಆ ಭಾಗ ಹಿಂದುಳಿದಿದ್ದು, ಅದಕ್ಕಾಗಿ ಹೆಚ್ಚು ಹಣವನ್ನು ಕೊಡಬೇಕು. ಹೈದರಾಬಾದ್ ಅಭಿವೃದ್ಧಿ ಯೋಜನೆಯಲ್ಲಿಯೂ ಕೂಡ ತಮ್ಮ ಇಲಾಖೆಯ ವತಿಯಿಂದ ಹೆಚ್ಚು ಹಣವನ್ನು ಕೊಡಬೇಕು. ಮಿಡಿಯಂ ನೀರಾವರಿ ಯೋಜನೆಯಿಂದ ಆ ಭಾಗಕ್ಕೆ ಹೆಚ್ಚು ಪ್ರಯೋಜನವಾಗುತ್ತದೆಂಬ ಉದ್ದೇಶವನ್ನು ಇಟ್ಟುಕೊಂಡು ಗುಲ್ಬರ್ಗ ವಲಯ ಕಛೇರಿ ಎಂಬುದಾಗಿ ಮಾಡಲಾಗಿದೆ. ಈ ಒಂದು ನಿರ್ಧಾರವನ್ನು ಹಿಂದಿನ ಜನತಾ ದಳ ಸರ್ಕಾರ ತೆಗೆದುಕೊಂಡಿದೆ, ಅದಕ್ಕಾಗಿ ಹೆಚ್ಚು ಹಣವನ್ನು ಒದಗಿಸುವ ಕಡೆ ಮಾನ್ಯ ಮಂತ್ರಿಗಳು ಗಮನಹರಿಸಬೇಕು. ಮತ್ತೆ ಆ ವಲಯ ಕಛೇರಿಯಲ್ಲಿ ಅನೇಕ ಹುದ್ದೆಗಳು ಖಾಲಿ ಇವೆ. ಅಲ್ಲಿಗೆ ಉತ್ತಮ ಅಧಿಕಾರಿಗಳನ್ನು ನೇಮಕ ಮಾಡಬೇಕು. ಸರಿಯಾದ ಇಂಜಿನಿಯರ್ಸ್‌ಗಳನ್ನು ಅಂದರೆ ಆ ಭಾಗದ ಕಡೆ ಸ್ವಲ್ಪ ಶ್ರದ್ಧೆ ಮಮತೆ ಇರತಕ್ಕ ಇಂಜಿನಿಯರ್‌ಗಳನ್ನು ನೇಮಕ ಮಾಡಿದರೆ ಅಲ್ಲಿನ ಜನರಿಗೆ ಅನುಕೂಲವಾಗುತ್ತದೆ. ಖಾಲಿ ಇರುವಂತಹ ಹುದ್ದೆಗಳನ್ನು ಕೂಡಲೇ ತುಂಬುವಂತಹ ಕೆಲಸವನ್ನು ಮಾನ್ಯ ಮಂತ್ರಿಗಳು ಮಾಡಬೇಕೆಂದು ಸಲಹೆ ನೀಡುತ್ತಿದ್ದೇನೆ.

ಈ ಬಗ್ಗೆ ಬಹಳ ಮಹತ್ವಪೂರ್ಣ ವಿಚಾರಗಳನ್ನು ನಾನು ಇಲ್ಲಿ ಇಟ್ಟಿದ್ದೇನೆ. ಸಣ್ಣ ನೀರಾವರಿ ಇಲಾಖೆ ಬಗ್ಗೆ ನಾನು ಇನ್ನೂ ಕೆಲವು ವಿಚಾರಗಳನ್ನು ಹೇಳುತ್ತೇನೆ. ಸಣ್ಣ ನೀರಾವರಿ ಯೋಜನೆಗಳು ನಮ್ಮ ರಾಜ್ಯದಲ್ಲಿ ಪ್ರಾಮುಖ್ಯತ್ವಪೂರ್ಣ ಯೋಜನೆಗಳು ಆಗಿರುತ್ತವೆ ಸಣ್ಣ ನೀರಾವರಿ ಯೋಜನೆಗಳ ಮುಖಾಂತರ ಬಹಳ ಜನರಿಗೆ ಹೆಚ್ಚಿನ ಅನುಕೂಲ ಮಾಡಿಕೊಡುವುದು ನಮ್ಮ ಕರ್ತವ್ಯವೆಂದು ನಾನು ಭಾವಿಸುತ್ತೇನೆ. ಹಿಂದೆ ವಿಶ್ವೇಶ್ವರಯ್ಯನವರು, ಮೈಸೂರು ಮಹಾರಾಜರು ಆ ಭಾಗದಲ್ಲಿರುವ

ಹೆಚ್ಚಿನ ಗ್ರಾಮಗಳಿಗೆ ಸಣ್ಣ ಪ್ರಮಾಣದ ಕೆರೆ ಕಾಲುವೆ ಮಾಡಿ ಜನರಿಗೆ ಹೆಚ್ಚಿನ ಅನುಕೂಲ ಮಾಡಿ ಕೊಟ್ಟಿದ್ದಾರೆ. ಇವತ್ತಿ ಸರ್ಕಾರದಲ್ಲಿ ಹಣಕಾಸಿನ ತೊಂದರೆ ಇರುವುದರಿಂದ, ಬೃಹತ್ ಹಾಗೂ ಮಧ್ಯಮ ಪ್ರಮಾಣದ ನೀರಾವರಿ ಯೋಜನೆಗಳನ್ನು ಮಾಡುವುದಕ್ಕಾಗುವುದಿಲ್ಲ. ಆ ದೃಷ್ಟಿಯಿಂದ ಸಣ್ಣ ಪ್ರಮಾಣದ ನೀರಾವರಿ ಯೋಜನೆಗಳಿಗೆ ಹೆಚ್ಚಿನ ಆದ್ಯತೆ ಕೊಡಬೇಕೆಂದು ಹೇಳುತ್ತೇನೆ. ಹೊಸ ಸರ್ಕಾರ ಬಂದಮೇಲೆ ಜನತೆ ಕೂಡಾ ಹೆಚ್ಚು ಅಪೇಕ್ಷೆಯನ್ನು ಪಟ್ಟಿದ್ದು ಅದರ ಬಗ್ಗೆ ಗಮನ ಕೊಡ ಬೇಕಾದದ್ದು ನಮ್ಮ ಕರ್ತವ್ಯ. ಅವರ ಅಪೇಕ್ಷೆ ಪೂರ್ತಿ ಮಾಡಬೇಕಾದರೆ ದುಡ್ಡಿನ ಅಭಾವ ಇರುವುದರಿಂದ ಸಣ್ಣ ನೀರಾವರಿ ಯೋಜನೆಗೆ ಹೆಚ್ಚು ಪ್ರಾಧಾನ್ಯತೆ ಕೊಟ್ಟು ಕೆಲಸ ಮಾಡಬೇಕಾಗುತ್ತದೆ. ಸಣ್ಣ ನೀರಾವರಿಯ ಬಗ್ಗೆ ಹೇಳುತ್ತಿರುವ ಉದ್ದೇಶ ಏನೆಂದರೆ, ದೊಡ್ಡ ಮತ್ತು ಮಧ್ಯಮ ಪ್ರಮಾಣದ ಯೋಜನೆಗಳಿಗೆ ಹೆಚ್ಚಿನ ಹಣವನ್ನು ಕೊಡುವುದಕ್ಕೆ ಸರ್ಕಾರಕ್ಕೆ ಆಗುವುದಿಲ್ಲ, ಇವತ್ತು ಸಣ್ಣ ಸಣ್ಣ ಕೆರೆಗಳ ಬಗ್ಗೆ ವಿಚಾರ ಮಾಡಬೇಕಾದ ಸಮಯದಲ್ಲಿ ಪ್ರತಿ ಗ್ರಾಮಕ್ಕೆ ಎಂಜಿನಿಯರ್‌ಗಳನ್ನು ಕಳಿಸಿ ಸರ್ವೇ ಮಾಡಿಸಬೇಕೆಂದು ಹೇಳುತ್ತೇನೆ. ಇವತ್ತಿ ಇಲ್ಲಿ ಸೂಕ್ತ ಸ್ಥಳಗಳನ್ನು ಗುರ್ತಿಸಿ ೨೦೦ ಎಕರೆ, ೩೦೦ ಎಕರೆ ನೀರಾವರಿ ಮಾಡುವ ಸಣ್ಣ ಸಣ್ಣ ಯೋಜನೆಗಳನ್ನು ಮಾಡುವ ಅಗತ್ಯ ಇದೆ. ನಮ್ಮ ಜನತಾದಳ ಸರ್ಕಾರ ಕೂಡಾ ಸಣ್ಣ ನೀರಾವರಿ ಯೋಜನೆಗಳಿಗೆ ಹೆಚ್ಚಿನ ಆದ್ಯತೆಯನ್ನು ಕೊಟ್ಟು ಹೆಚ್ಚಿನ ಪ್ರಮಾಣದಲ್ಲಿ ಚಿಕ್ಕ ಚಿಕ್ಕ ಕೆರೆಗಳ ನಿರ್ಮಾಣದ ಬಗ್ಗೆ ಆದ್ಯತೆ ಕೊಟ್ಟಿತ್ತು. ಆ ಪ್ರಕಾರ ಕೋಲಾರ, ಮಂಡ್ಯ, ಬೀದರ್, ಗುಲ್ಬರ್ಗ, ರಾಯಚೂರು ಜಿಲ್ಲೆಗಳಲ್ಲಿ ಸಾಕಷ್ಟು ಸಣ್ಣ ಪ್ರಮಾಣದ ನೀರಾವರಿ ಯೋಜನೆಗಳ ಬಗ್ಗೆ ಸರ್ವೇ ಮಾಡಿಸಿ, ಸ್ಥಳ ಪರಿಶೀಲನೆ ಮಾಡಿಸಿ ಈಗಾಗಲೇ ನೀರಾವರಿ ಕಾಮಗಾರಿ ಗಳನ್ನು ಪ್ರಾರಂಭ ಮಾಡಿದ್ದೇವೆ. ಅಂತಹ ಕಾಮಗಾರಿಗಳನ್ನು ಮುಂದುವರಿಸಿ ಮುಗಿಸಬೇಕಾದದ್ದು ನಮ್ಮ ಕರ್ತವ್ಯ. ಇವತ್ತು ದೊಡ್ಡ ಹಾಗೂ ಮಧ್ಯಮ ಪ್ರಮಾಣದ ಯೋಜನೆಗಳಿಗೆ ಸರ್ಕಾರದ ಹಣಕಾಸಿನ ತೊಂದರೆ ಇರುವುದನ್ನು ನಾನೂ ಸಹ ಒಪ್ಪಿಕೊಳ್ಳುತ್ತೇನೆ, ಸಣ್ಣ ಪ್ರಮಾಣದ ಯೋಜನೆಯ ಅಡಿಯಲ್ಲಿ ಪ್ರತಿಯೊಂದು ಗ್ರಾಮಕ್ಕೆ ಒಂದೊಂದು ಕೆರೆಗಳ ನಿರ್ಮಾಣವಾಗಬೇಕು. ಇವತ್ತು ಪ್ರತಿ ಗ್ರಾಮಕ್ಕೆ ಹೇಗಾದರೂ ಒಂದಕ್ಕಿಂತ ಹೆಚ್ಚು ಕೆರೆಗಳನ್ನು ಒದಗಿಸುವ ಬಗ್ಗೆ ಹೆಚ್ಚಿನ ಆದ್ಯತೆ ಕೊಟ್ಟು ರಾಜ್ಯದಲ್ಲಿ ಸಣ ಪ್ರಮಾಣದ ಕೆರೆಗಳ ಅಭಿವೃದ್ಧಿಗೆ ಸರ್ಕಾರ ಹೆಚ್ಚು ಗಮನಹರಿಸಬೇಕೆಂದು ನಾನು ಹೇಳುತ್ತೇನೆ. ಮೊನ್ನೆ ಗುಲ್ಬರ್ಗಾಕ್ಕೆ ತಾವು ಬಂದಿದ್ದ ಸಮಯದಲ್ಲಿ ಒಂದು ಮಾತನ್ನು ಹೇಳಿದ್ದೀರಿ. ಏನೆಂದರೆ ಸಣ್ಣ ನೀರಾವರಿ ಕೆಲಸ ಕಾರ್ಯಗಳು ಜಿಲ್ಲಾ ಪರಿಷತ್ತಿನ ಕೈಕೆಳಗೆ ಬರುತ್ತದೆಂದು. ಆದರೆ ಜಿಲ್ಲಾ ಪರಿಷತ್ತು ಸಾಕಷ್ಟು ಕೆಲಸ ಕಾರ್ಯಗಳನ್ನು ನೋಡಿಕೊಳ್ಳಬೇಕಾದ ಭಾರ ಇರುವುದರಿಂದ, ಅದಕ್ಕೆ ಕೆಲಸ ಹೆಚ್ಚು ಇರುವ ಕಾರಣ ಇವತ್ತು ಅವು ಸಣ್ಣ ನೀರಾವರಿ ಬಗ್ಗೆ ಹೆಚ್ಚಿನ ಆದ್ಯತೆಯನ್ನು ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ. ತಾವು ಸಣ್ಣ ನೀರಾವರಿ ಯೋಜನೆಗಳ ವಿಭಾಗವನ್ನು ಲೋಕೋಪಯೋಗಿ ಇಲಾಖೆಗೆ ವರ್ಗ ಮಾಡಿದ್ದೀರಿ. ಸಣ್ಣ ನೀರಾವರಿಗೇ ಒಂದು ಪ್ರತ್ಯೇಕ ಇಲಾಖೆಯನ್ನು ಮಾಡಿದರೆ ಒಳ್ಳೆಯದಾಗುತ್ತದೆಂದು ನಾನು ಹೇಳುತ್ತೇನೆ. ಜಿಲ್ಲಾ ಪರಿಷತ್ತಿನಲ್ಲಿಯೂ ಕೂಡಾ ಕೆರೆಗಳ ಬಗ್ಗೆ ಸಣ್ಣ ನೀರಾವರಿ ಬಗ್ಗೆ ಹೆಚ್ಚಿನ ಆಸಕ್ತಿ ತೋರಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಇದರಿಂದಾಗಿ ಸಣ್ಣ ನೀರಾವರಿ ಇಲಾಖೆ ಸಾಕಷ್ಟು ಹಿಂದೆಬಿದ್ದಿದೆ. ಸಣ್ಣ ನೀರಾವರಿ ಲೋಕೋಪಯೋಗಿ ಕೈಕೆಳಗೆ ಇದ್ದರೆ ಹೆಚ್ಚು ಕೆಲಸ ಆಗದಿದ್ದರಿಂದ ಇದಕ್ಕೆ ಪ್ರತ್ಯೇಕ ಇಲಾಖೆ ಸ್ವಾತಂತ್ರವಾಗಿ ಕೊಡಬೇಕೆಂದು ಹೇಳುತ್ತೇನೆ. ಈ ಬಗ್ಗೆ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಹೇಳುತ್ತೇನೆ. ಬೀದರ್, ಗುಲ್ಬರ್ಗ ರಾಯಚೂರು ಜಿಲ್ಲೆಗಳಲ್ಲಿ ಸಾಕಷ್ಟು ಸಣ್ಣ ನೀರಾವರಿ ಯೋಜನೆಗಳು ಇವೆ. ವಿಶ್ವಬ್ಯಾಂಕಿನವರಿಂದ ಕೂಡಾ ಸಾಕಷ್ಟು ಸಹಾಯ ಸಿಗುತ್ತಿದ್ದರೂ ಅದನ್ನು ಸರಿಯಾಗಿ ಉಪಯೋಗಿಸುವುದಕ್ಕೆ ಆಗುತ್ತಾ ಇಲ್ಲ. ಆದ್ದರಿಂದ ಸಣ್ಣ ನೀರಾವರಿ ಯೋಜನೆಗಳಿಗೆ ಆದಷ್ಟು ಶೀಘ್ರವಾಗಿ ಹೊಸ ಯೋಜನೆಗಳನ್ನು ತಯಾರು ಮಾಡಿ, ಹೊಸ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಇಡೀ ರಾಜ್ಯಕ್ಕೇ ಒಂದು ಮಾದರಿ ಯೋಜನೆಯನ್ನು ಸಣ್ಣ ನೀರಾವರಿ ಅಡಿಯಲ್ಲಿ ತಂದು ಇದಕ್ಕೆ ಸಿಗುವ ಸಹಾಯವನ್ನೂ ಸದುಪಯೋಗ ಪಡಿಸಿಕೊಳ್ಳಬೇಕೆಂದು ಹೇಳುತ್ತೇನೆ ನೀರಾವರಿ ಯೋಜನೆಗಳ ಬಗ್ಗೆ ಮಾನ್ಯ ದೇವೇಗೌಡರು ಯಾವ ರೀತಿ ಪ್ರಸಿದ್ಧರಾದರೋ ಅದೇ ರೀತಿಯಲ್ಲಿ ಮಾನ್ಯ ಪುಟ್ಟಸ್ವಾಮಿ ಗೌಡರೂ ಪ್ರಸಿದ್ಧರಾಗಬೇಕೆಂದು ನಾನು ಹೇಳುತ್ತೇನೆ.

ಶ್ರೀ ಎಲ್. ಆರ್. ಶಿವರಾಮೇಗೌಡ.— ದೇವೇಗೌಡರ ಕಥೆ ಬೇಡ, ನೀರಾವರಿ ಬಗ್ಗೆ ಮಾತನಾಡಿ.

ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್.—ಸಣ್ಣ ಸಣ್ಣ ಕೆರೆಗಳನ್ನು ನಿರ್ಮಾಣ ಮಾಡಿದರೆ ನಿಮಗೆ ಹೆಚ್ಚು ಗೌರವ ಬರುತ್ತದೆ. ಒಳ್ಳೆಯ ಹೆಸರು ಬರುತ್ತದೆಂದು ನಾನು ಹೇಳುತ್ತೇನೆ. ಮಾನ್ಯ ಪುಟ್ಟಸ್ವಾಮಿಗೌಡರು ಈ ದಿಕ್ಕಿನಲ್ಲಿ ಒಳ್ಳೆಯ ಕೆಲಸ ಮಾಡುತ್ತಾರೆಂದೂ ಹಾಗೂ ಅವರಿಗೆ ಒಳ್ಳೆಯ ಹೆಸರು ಬರುತ್ತದೆಂದೂ ನಾನು ನಂಬಿರುತ್ತೇನೆ.

ತಾವು ಸಣ್ಣ ನೀರಾವರಿ ಯೋಜನೆಗಳನ್ನು ಏನಂ ಜಿಲ್ಲಾ ಪರಿಷತ್‌ನವರಿಗೆ ವಹಿಸಿದ್ದೀರಿ ಅದನ್ನು ವಾಪಸ್ಸು ತೆಗೆದುಕೊಂಡು ಸಪರೇಟಾಗಿ ಸಣ್ಣ ನೀರಾವರಿ ಇಲಾಖೆಯನ್ನು ರಚನೆ ಮಾಡಬೇಕು ಹಾಗೂ ಸಣ್ಣ ನೀರಾವರಿ ಇಲಾಖೆಯನ್ನು ಲೋಕೋಪಯೋಗಿ ಇಲಾಖೆಯಿಂದ ಬೇರ್ಪಡಿಸಬೇಕೆಂದು ಸೂಕ್ತವಾದ ಸಲಹೆಗಳನ್ನು ಜನರ ಪರವಾಗಿ ಕೊಡುತ್ತಿದ್ದೇನೆ. ಅತಿ ಶೀಘ್ರವಾಗಿ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದೇನೆ.

ಇನ್ನು ಗಂಗಾ ಕಲ್ಯಾಣ ಯೋಜನೆಯನ್ನು ನಮ್ಮ ಜನತಾ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಜಾರಿಗೆ ತಂದಿದ್ದೇವೆ. ಆ ಯೋಜನೆಯಿಂದ ಬಹಳಷ್ಟು ಗ್ರಾಮಗಳಿಗೆ ನೀರಾವರಿ ಸೌಲಭ್ಯವನ್ನು ಕಲ್ಪಿಸಿಕೊಡಲಾಗಿದೆ. ಗಂಗಾ ಕಲ್ಯಾಣ ಯೋಜನೆಯಲ್ಲಿ ಎರಡು ವಿಧಗಳಿವೆ, ಒಂದು ಹರಿಜನ–ಗಿರಿಜನರಿಗೆ ಅನುಕೂಲವಾಗುವಂತಹ ಗಂಗಾ ಕಲ್ಯಾಣ ಯೋಜನೆ ಇನ್ನೊಂದು ಹಿಂದುಳಿದ ಜನರಿಗೆ ಅನುಕೂಲವಾಗುವಂತಹ ಯೋಜನೆ ಇದೆ. ಈ ಎರಡು ಯೋಜನೆಗಳಿಗೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಹೆಚ್ಚಿನ ಆದ್ಯತೆಯನ್ನು ಕೊಡಬೇಕು. ಬಡಜನರು ಹರಿಜನರು ಗಿರಿಜನರು ಯಾರೂ ನೀರಾವರಿ ಸೌಲಭ್ಯಗಳನ್ನು ಹೊಂದುವುದಕ್ಕೆ ಸಾಧ್ಯವಿಲ್ಲ ಅಂತಹವರಿಗೆ ಈ ಯೋಜನೆಯಿಂದ ಬಹಳ ಅನುಕೂಲವಾಗುತ್ತದೆ. ಆರ್ಥಿಕ ಮುಗ್ಗಟ್ಟಿನಲ್ಲಿರತಕ್ಕ ರೈತರಿಗೆ ಗಂಗಾ ಕಲ್ಯಾಣ ಯೋಜನೆಯಿಂದ ಅನುಕೂಲವಾಗುತ್ತದೆ. ಆದ್ದರಿಂದ ಈ ಎರಡು ಯೋಜನೆಯನ್ನು ಶೀಘ್ರಗತಿಯಿಂದ ನಮ್ಮ ರಾಜ್ಯದಲ್ಲಿ ಜಾರಿಗೆ ತರಬೇಕು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಎಷ್ಟೆಷ್ಟು ಗಂಗಾ ಕಲ್ಯಾಣ ಯೋಜನೆಗಳು ಆಗಿವೆ ಎನ್ನುವುದರ ಬಗ್ಗೆ ಒಂದು ಸರ್ವೆ ಮಾಡಿಸಿ, ಎಲ್ಲಿ ಈ ಯೋಜನೆಯ ಅನುಕೂಲ ಸಿಕ್ಕಿಲ್ಲ. ಅಂತಹ ಕಡೆಗಳಲ್ಲಿ ಹೆಚ್ಚಿನ ಆದ್ಯತೆಯನ್ನು ಕೊಟ್ಟು ಕೆಲಸ ಮಾಡಬೇಕು. ಈ ರೀತಿ ಮಾಡಿದರೆ ಬಡ ಹರಿಜನ–ಗಿರಿಜನರಿಗೆ ಮತ್ತು ಹಿಂದುಳಿದ ವರ್ಗದವರಿಗೆ ಕಷ್ಟಪಟ್ಟು ಕೆಲಸ ಮಾಡತಕ್ಕ ಜನರಿಗೆ ಹೆಚ್ಚು ಅನುಕೂಲವಾಗುತ್ತದೆಂದು ಹೇಳಗತ್ತಿದ್ದೇನೆ. ಮಾನ್ಯ ಮಂತ್ರಿಗಳು ಈ ವಿಚಾರದಲ್ಲಿ ಹೆಚ್ಚಿನ ಗಮನ ಕೊಡಬೇಕು. ಮಂತ್ರಿಗಳು ಈ ದಿಸೆಯಲ್ಲಿ ಒಳ್ಳೆಯ ಕೆಲಸ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ನಮ್ಮ ರಾಜ್ಯದಲ್ಲಿ ಹಲವಾರು ಏತ ನೀರಾವರಿ ಯೋಜನೆಗಳನ್ನು ಸಕ್ಷ ಮಾಡಿದ್ದೇವೆ. ಏತ ನೀರಾವರಿ ನಿಗಮವನ್ನು ನಾನು ಮಂತ್ರಿಯಾಗಿದ್ದ ಕಾಲದಲ್ಲಿ ಸ್ಥಾಪನೆ ಮಾಡಲಾಗಿದೆ. ಕೃಷ್ಣಾ ಬೇಸಿನ್, ಕಾವೇರಿ ಬೇಸಿನ್ ಈ ಎರಡೂ ಬೇಸಿನ್‌ಗಳನ್ನು ವಿಂಗಡಣೆ ಮಾಡಿಕೊಂಡು ಅದಕ್ಕೆ ಸಾಕಷ್ಟು ಹಣವನ್ನು ಕೊಟ್ಟರೂ ಕೂಡ ಸಮರ್ಪಕವಾದ ಕೆಲಸವನ್ನು ಮಾಡುವುದಕ್ಕೆ ಆಗುತ್ತಿಲ್ಲ. ಏತ ನೀರಾವರಿ ಯೋಜನೆಗೆ ೧ ಕೋಟಿ ರೂಪಾಯಿ ಕೊಟ್ಟರೆ ಅವರೇನು ಕೆಲಸ ಮಾಡುವುದಕ್ಕಾಗುತ್ತದೆ ? ಒಂದೊಂದು ಯೋಜನೆಗೆ ೧ ಲಕ್ಷ ಒಂದೂವರೆ ಲಕ್ಷ ಕೊಟ್ಟರೆ ಆ ಪ್ರಾಜೆಕ್ಟ್‌ಗಳಿಗೆ ತೊಂದರೆಯಾಗುತ್ತದೆ. ಬೀದರ್, ಗುಲ್ಬರ್ಗ ಬಿಜಾಪುರ ಭಾಗಗಳಲ್ಲಿ ಏತ ನೀರಾವರಿ ಯೋಜನೆಯನ್ನು ಬಲಪಡಿಸಬೇಕು. ಅಲ್ಲಿ ಸಾಕಷ್ಟು ಏತ ನೀರಾವರಿ ಯೋಜನೆಗಳನ್ನು ಹಾಕಿಕೊಳ್ಳಲಾಗಿದೆ. ಆ ಭಾಗಕ್ಕೆ ಹೆಚ್ಚಿನ ಹಣಕಾಸನ್ನು ಒದಗಿಸಿ ಕೊಟ್ಟರೆ ಮಾತ್ರ ಸಕಾಲದಲ್ಲಿ ಈ ಯೋಜನೆಗನ್ನು ಮುಗಿಸುವುದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ಹೆಚ್ಚಿನ ಪ್ರಮಾಣದಲ್ಲಿ ಹಣವನ್ನು ಒದಗಿಸಿಕೊಡಬೇಕು. ಬೀದರ್ ಜಿಲ್ಲೆಯಲ್ಲಿ ೧೮ ಏತ ನೀರಾವರಿ ಯೋಜನೆಗಳಿವೆ. ಗುಲ್ಬರ್ಗದಲ್ಲಿ ೨೦ ನೀರಾವರಿ ಯೋಜನೆಗಳಿವೆ. ಅವುಗಳೆಲ್ಲ ಸಿಕ್ ಆಗಿವೆ. ಕೆಇಬಿನವರ ತೊಂದರೆಯಿಂದ. ಈ ಪೈಪುಗಳ ಜೋಡಣೆಯಿಲ್ಲದೆ, ವೋಟಾರುಗಳಂ ಸುಟ್ಟಿವೆ ಈ ತರಹ ನಾನಾ ತೊಂದರೆಗಳಿಂದ ಈ ಯೋಜನೆಗಳು ಸ್ಥಗಿತಗೊಂಡಿವೆ. ಇಂತಹ ಹಲವಾರು ನ್ಯೂನ್ಯತೆಗಳನ್ನು ಗಮನಿಸಿ ಹಿಂದಿನ ಸರಕಾರ ಎರಡು ಏತ ನೀರಾವರಿ ನಿಗಮಗಳನ್ನು ರಚನೆ ಮಾಡಿದೆ. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಈ ಏತ ನೀರಾವರಿ ನಿಗಮಕ್ಕೆ ಹೆಚ್ಚಿನ ಹಣಕಾಸಿನ ವ್ಯವಸ್ಥೆ ಮಾಡಿ, ಅಲ್ಲಿರತಕ್ಕ ನ್ಯೂನ್ಯತೆಗಳನ್ನು ಸ್ವತಃ ಭೇಟಿ ಕೊಡುವುದರ ಮೂಲಕ ಅಥವಾ ಇಲಾಖೆಯ ಅಧಿಕಾರಿಗಳ ಮುಖಾಂತರ ವಿಚಾರಗಳನ್ನು ತಿಳಿದು ಹೆಚ್ಚಿನ ಹಣವನ್ನು ಕೊಡುವುದಕ್ಕೆ ತಾವು ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಅಪೇಕ್ಷೆಪಡುತ್ತೇನೆ. ನೀರಾವರಿ ಸೌಲಭ್ಯ ಕಲ್ಪಿಸಿ ಕೊಡುವ ಬಗ್ಗೆ ಸಾಕಷ್ಟು ರೀತಿಯಲ್ಲಿ ಕೆಲಸ ಮಾಡಿದರೆ ನಮ್ಮ ರಾಜ್ಯದ ರೈತಾಪಿ ಜನರಿಗೆ ಅನುಕೂಲವಾಗುತ್ತದೆಂದು ಹೇಳಬಯಸುತ್ತೇನೆ. ಈಗ ನಮ್ಮ ರಾಜ್ಯದಲ್ಲಿ ಆರ್ಥಿಕ ಪರಿಸ್ಥಿತಿ ಸುಧಾರಿಸಿದೆ. ೩೪೦ ಕೋಟಿ ರೂಪಾಯಿಗಳಿಗಿಂತ ಅಧಿಕ ಆದಾಯ ಎಕ್ಸೆಸ್ ಬಂದು ಇಲಾಖೆಯಿಂದಲೇ ಬಂದಿದೆಯೆಂದು ಮಾನ್ಯ ಮುಖ್ಯಮಂತ್ರಿಗಳು ಹೊನ್ನೆ ಹೇಳಿದರು. ಇದು ಬಹಳ ಸ್ವಾಗತಾರ್ಹವಾದ ಮಾತು, ಹೆಚ್ಚಿನ ಆದಾಯ ಬರುವಂಥಹ ಇಲಾಖೆಗಳು ಏನಿವೆ ಅದರಿಂದ ಆದಾಯವನ್ನು ತೆಗೆದುಕೊಂಡು ನೀರಾವರಿ ಮತ್ತು ಲೋಕೋಪಯೋಗಿ ಇಲಾಖೆಗೆ ಕೊಡುವುದರ ಮೂಲಕ ನಮ್ಮ ಭಾಗದ ಜನರಿಗೆ ಅನುಕೂಲ ಮಾಡಿಕೊಡುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಬೇಕೆನ್ನು ಮಾತನ್ನು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತರುಶ್ತಿವ್ದನೆ, ಲೋಕೋಪಯೋಗಿ ಇಲಾಖೆಯ ಬಗ್ಗೆ

ಕೆಲವೊಂದು ವಿಚಾರಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಹಿಂದೆ ಯಾವ ಪ್ರಮಾಣದಲ್ಲಿ, ಯಾವ ಕ್ವಾಲಿಟಿಯಲ್ಲಿ ಕೆಲಸಗಳು ಆಗುತ್ತಿತ್ತೋ ಆ ಪ್ರಮಾಣ ಮತ್ತು ಕ್ವಾಲಿಟಿಯಲ್ಲಿ ಕೆಲಸಗಳು ಇಂದು ಆಗುತ್ತಿಲ್ಲ. ಸಾಕಷ್ಟು ಹಣವನ್ನು ಖರ್ಚು ಮಾಡಿದರೂ ಸಹ ಒಳ್ಳೆಯ ಬಿಲ್ಡಿಂಗ್‌ಗಳನ್ನು ಕಟ್ಟುವುದಕ್ಕೆ ಆಗುತ್ತಿಲ್ಲ. ಒಳ್ಳೆಯ ಹಾಸ್ಟೆಲ್‌ಗಳನ್ನು ದೊಡ್ಡ ದೊಡ್ಡ ಹಾಸ್ಟೆಲ್‌ಗಳನ್ನು ಕಟ್ಟುವುದಕ್ಕೆ ಆಗುವುದಿಲ್ಲ. ಇದು ದುರದೃಷ್ಟ ಸಂಗತಿಯೆಂದು ಹೇಳಿದರೂ ತಪ್ಪಾಗಲಾರದು. ಇಂತಹ ವಿಚಾರಗಳನ್ನು ಗಮನಕ್ಕೆ ತೆಗೆದುಕೊಂಡಾಗ, ಹಿಂದೆ ಯಾವ ಪ್ರಮಾಣದಲ್ಲಿ ರಸ್ತೆಗಳನ್ನು ಮಾಡುತ್ತಿದ್ದರು, ಆ ಪ್ರಮಾಣದಲ್ಲಿ ರಸ್ತೆಗಳನ್ನು ಮಾಡುತ್ತಿಲ್ಲ. ಕಚ್ಚಾ ರಸ್ತೆಗಳನ್ನು ತೆಗೆದುಕೊಂಡಿದ್ದರೆ, ಆ ಕಚ್ಚಾ ರಸ್ತೆಗಳಿಗೆ ಸರಿಯಾಗಿ ಮಣ್ಣು ಹಾಕುತ್ತಿಲ್ಲ. ನಮ್ಮ ಹೈದರಾಬಾದ್ ಕರ್ನಾಟಕ ಭಾಗದಲ್ಲಿ ಎಲ್ಲಾ ರಸ್ತೆಗಳು ಸರಿಯಾಗಿಲ್ಲ. ನಾವು ಬಹಳ ತೊಂದರೆಯಲ್ಲಿದ್ದೇವೆ. ಮಂಗಳೂರು–ಮೈಸೂರು ಈ ಭಾಗಗಳಲ್ಲಿ ಎಲ್ಲಾ ರಸ್ತೆಗಳಿಗೂ ಟಾರು ಹಾಕಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲೂ ಸಹ ಪ್ರತಿಯೊಂದು ರಸ್ತೆಗೂ ಟಾರು ಹಾಕಿದ್ದಾರೆ. ಹೈದರಾಬಾದ್–ಕರ್ನಾಟಕ ವಿರಿಯಾ ಬಹಳ ಹಿಂದುಳಿದ ಪ್ರದೇಶ. ಆ ಭಾಗಕ್ಕೆ ಹೆಚ್ಚಿನ ಹಣಕಾಸಿನ ವ್ಯವಸ್ಥೆಯನ್ನು ಮಾಡಬೇಕು. ಆ ಭಾಗಕ್ಕೆ ಬಜೆಟ್‌ನಲ್ಲಿ ಹೆಚ್ಚು ಹಣವನ್ನು ಒದಗಿಸಬೇಕು ಎಲ್ಲಾ ರೀತಿಯ ರಸ್ತೆ ನಿರ್ಮಾಣಕ್ಕೆ ಬಿಲ್ಡಿಂಗ್ ನಿರ್ಮಾಣಕ್ಕೆ, ಸೇತುವೆಗಳನ್ನು ಕಟ್ಟುವುದಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕೆಂದು ಒತ್ತಿ ಹೇಳುವುದಕ್ಕೆ ಬಯಸುತ್ತೇನೆ.

ನಮ್ಮ ಭಾಗದಲ್ಲಿ ಜಿಲ್ಲಾಮಟ್ಟದಿಂದ ತಾಲ್ಲೂಕು ಮಟ್ಟಕ್ಕೆ ಹೋಗುವ ರಸ್ತೆಗಳಿಗೆ ಆದರೆ ಅವುಗಳ ದುರಸ್ತಿಯೇ ಇಲ್ಲ. ಅಲ್ಲಿ ಗ್ಯಾಂಗ್‌ಮನ್‌ಗಳು ಇರುವ ಹಾಗಿಲ್ಲ. ಇದನ್ನು ಒಬ್ಬರೂ ಹೋಗಿ ನೋಡಲಿಕ್ಕೆ ತಯಾರಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಕರ್ನಾಟಕ ಹೋಗಿ ನೋಡಿ ಬಂದಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳ ಪ್ರತಿಕ್ಷೇತ್ರವಾದ ಚಿಂಚೋಳಿಯಲ್ಲಿ. ಎಷ್ಟೋ ರಸ್ತೆಗಳಿಲ್ಲ, ಹೊಸ್ಕೆ ಹೋಗಿದ್ದ ಸಂದರ್ಭದಲ್ಲಿ ಕಾರೂ ಕೂಡ ಹೋಗಲಿಕ್ಕೆ ಸಾಧ್ಯವಾಗಲಿಲ್ಲ. ಯಾವ ಮುಖ್ಯಮಂತ್ರಿಗಳು ರಾಜ್ಯದ ಪ್ರತಿನಿಧಿಯಾಗಿ ಆ ಪ್ರತ ಕ್ಷೇತ್ರದಿಂದ ಆರಿಸಿ ಬಂದಿದ್ದಾರೋ ಅಲ್ಲಿ ಎಷ್ಟೋ ಗ್ರಾಮಗಳಿಗೆ ಟಾರು ರಸ್ತೆ ಇಲ್ಲ. ಪಕ್ಕಾ ರಸ್ತೆಗಳು ಇಲ್ಲ. ಇಂತಹ ಒಂದು ಸಂದರ್ಭದಲ್ಲಿ ನಾನು ಆರಿಕೆ ಮಾಡಿಕೊಳ್ಳುವುದೇನೆಂದರೆ, ಬಹಳಷ್ಟು ರಸ್ತೆಗಳು ಕೆಟ್ಟು ಹೋಗಿವೆ, ಅವುಗಳ ದುರಸ್ತಿ ಇಲ್ಲ ಇಂತಹ ಎಲ್ಲ ರಸ್ತೆಗಳಿಗೆ ಸಮರ್ಪಕವಾದ ವ್ಯವಸ್ಥೆ ಮಾಡುವುದು ತಮ್ಮ ಕರ್ತವ್ಯವೆಂದು ಸರಕಾರ ತಿಳಿಸಿ ಕೊಂಡಿದ್ದೇನೆ. ನಮ್ಮ ಸ್ವಾತಂತ್ರ್ಯ ಬಂದು ಸಲಪತ್ತು ವರ್ಷಗಳಾದರೂ ಕೂಡ ಇನ್ನೂ ಪ್ರತಿಗೆ ಎಷ್ಟೋ ಗ್ರಾಮಗಳಿಗೆ ನೀರಿನ ವ್ಯವಸ್ಥೆಯಾಗಲೀ. ರಸ್ತೆಗಳಾಗಲೀ, ಬಸ್ಸಿನ ವ್ಯವಸ್ಥೆಯಾಗಲೀ. ಕೊಡುವಲ್ಲಿ ಎಲ್ಲಾ ಸರ್ಕಾರಗಳೂ ವಿಫಲವಾಗಿವೆ ಎಂದು ನಾವು ಒಪ್ಪಿಕೊಳ್ಳಲೇಬೇಕಾಗುತ್ತದೆ. ಆದ್ದರಿಂದ ಇಷ್ಟು ಪ್ರಾಮುಖ್ಯವಾದ ರಸ್ತೆಗಳು, ಜಿಲ್ಲಾ ಮಟ್ಟದ, ತಾಲ್ಲೂಕು ಮಟ್ಟದ ರಸ್ತೆಗಳಾಗಲೀ, ಮಂಡಲ್ ಪಂಚಾಯತ್ ಮಟ್ಟಿತರ ರಸ್ತೆಗಳಾಗಲಿ ಪಿ.ಡಬ್ಲ್ಯೂ.ಡಿ ಯವರು ಹೆಚ್ಚಿಗೆ ತೆಗೆದುಕೊಳ್ಳಬೇಕು, ಇಲ್ಲಿ ಒಂದು ಅಂಶವನ್ನು ಗಮನಿಸಬೇಕಾಗುತ್ತದೆ. ಜಿಲ್ಲಾ ಪರಿಷತ್ತುಗಳು ಬಂದ ಮೇಲೆ ಎಲ್ಲಾ ರಸ್ತೆಗಳನ್ನು ಅವುಗಳಿಗೆ ಮರುವಿಂಗಡಣೆ ಮಾಡಿದ್ದಾರೆ. ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಜಿಲ್ಲಾ ಪರಿಷತ್ತಿನಲ್ಲಿರತಕ್ಕಂಥ ಪ್ರಮುಖವಾದ ರಸ್ತೆಗಳನ್ನು ತಾವು ಪಿ.ಡಬ್ಲ್ಯೂ.ಡಿ ಯಿಂದ ಮತ್ತೆ ವಾಪಸ್ ತೆಗೆದುಕೊಂಡು, ಲೋಕೋಪಯೋಗಿ ಇಲಾಖೆಯ ಮುಖಾಂತರ ಹೆಚ್ಚು ಹಣ ಕೊಟ್ಟು, ಈ ವ್ಯವಸ್ಥೆಗಳನ್ನು ಕೊಡಲು ಮತ್ತು ಪರಿಶೀಲನೆ ಮಾಡಬೇಕೆಂದು ಸ್ಪಷ್ಟವಾಗಿ ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ರಸ್ತೆಗಳ ನಿರ್ಮಾಣ ಬಹಳ ಮುಖ್ಯವಾದದ್ದು. ಅದೇ ಪ್ರಕಾರ ಬಿಲ್ಡಿಂಗ್ ಕಟ್ಟುವುದು ಸಹ ಬಹಳ ಮುಖ್ಯವಾದ ಕೆಲಸ. ಇವೆರಡರ ಬಗ್ಗೆ ನಿಮ್ಮ ಇಲಾಖೆಗೆ ಬಹಳ ಜವಾಬ್ದಾರಿ ಇದೆ. ಈ ಇಲಾಖೆಯಿಂದ ಸಾಕಷ್ಟು ಕೆಲಸಗಳು ನಮ್ಮ ರಾಜ್ಯದಲ್ಲಿ ಆಗಬೇಕಾಗಿದೆ. ಈ ಕಾರಣದಿಂದ ಕ್ವಾಲಿಟಿ ಬಗ್ಗೆ ಕೂಡ ಹೆಚ್ಚು ಗಮನ ಕೊಡಬೇಕು. ಹಿಂದೆ ಯಾರು ಬಿಲ್ಡಿಂಗ್ ಕಟ್ಟುತ್ತಿದ್ದರೂ, ಅದನ್ನು ತೆಗೆಯಬೇಕಾದರೆ ಎಷ್ಟೋ ಕಷ್ಟಪಡುತ್ತಿದ್ದರು. ಇವತ್ತು ಬಿಲ್ಡಿಂಗ್ ಕಟ್ಟಿದರೆ ಎರಡು–ಮೂರು ವರ್ಷಗಳಲ್ಲಿ ಬಿರುಕುಗಳು ಬಿದ್ದು ಹೋಗಿರುವ ನಿದರ್ಶನಗಳನ್ನು ಕರ್ನಾಟಕ ಕಂಡಿದ್ದೇವೆ. ನಮ್ಮ ಚುರುಕಿನಾಳ ಪ್ರದೇಶದಲ್ಲಿ ಒಂದು ಬಿಲ್ಡಿಂಗ್ ಕಟ್ಟಿದ್ದಾರೆ ಅವನ್ನು ಕಟ್ಟಿ ಒಂದು ವರ್ಷ ಕೂಡ ಆಗಿಲ್ಲ. ಅದು ಬಿದ್ದು ಹೋಗಿದೆ. ನಾನು ಹೇಳುವುದು ಇಷ್ಟೆ, ಇಷ್ಟೆಲ್ಲ ಕೇಂದ್ರ ಸರಕಾರದವರು ದುಡ್ಡು ಕೊಟ್ಟರೂ ಸಹ ಇಲಾಖೆಯ ಅಧಿಕಾರಿಗಳು ಇರಬಹುದು, ಯಾರೇ ಜನರು ಇರಬಹುದು, ತಪ್ಪು ತಿಳುವಳಿಕೆ ಮುಖಾಂತರ ಸಮರ್ಪಕವಾದ ಕೆಲಸ ಮಾಡದೇ ಇರುವ ರೀತಿಯಲ್ಲಿ ಅದು ರಸ್ತೆಗಳು ಇರಬಹುದು, ಕಟ್ಟಡ ಇರಬಹುದು, ನೀರಾವರಿ ಯೋಜನೆಗಳು ಇರಬಹುದು, ಅವುಗಳು ಕಂಠಿತವಾಗುವ ಸಾಧ್ಯತೆ

ಇದೆ, ಈ ಎಲ್ಲ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ತಾವು ಎಲ್ಲ ಪ್ರದೇಶಗಳಿಗೆ, ದೊಡ್ಡ ಕೆರೆ ಗಳಿರುವ ಜಾಗಕ್ಕೆ ಭೇಟಿಕೊಟ್ಟು ಎಲ್ಲಿ ಸರಿಯಾಗಿ ಕೆಲಸ ನಡೆಯುತ್ತಿಲ್ಲ. ಅಂತಹ ಕಡೆಗಳಲ್ಲಿ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇವೆ. ನಾನು ಎಸ್ಟಿಮೇಟ್ ಕಮಿಟಿ ಮೆಂಬರ್ ಇದ್ದಾಗ ಚುರುಕಿನಾಳ ಪ್ರದೇಶಕ್ಕೆ ಭೇಟಿ ಕೊಟ್ಟಿದಾಗ ಅಲ್ಲಿ ಬಹಳಷ್ಟು ಕಟ್ಟಡಗಳು ತೀರಾ ಕೆಳಮಟ್ಟದಲ್ಲಿದ್ದವು. ಇಲ್ಲಿಯವರೆಗೂ ಯಾವುದೇ ಕ್ರಮ ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ. ಇಂತಹ ಹಲವಾರು ವಿಚಾರಗಳು ತಮ್ಮ ಗಮನಕ್ಕೆ ಬಂದಿರಬಹುದು. ಆದ್ದರಿಂದ...

ಚೇರ್ಮನ್.—ಸ್ವಲ್ಪ ತಡೆಯಿರಿ. ಈಗ ಮುಖ್ಯಮಂತ್ರಿಗಳು ಒಂದು ಹೇಳಿಕೆ ಕೊಡುತ್ತಾರೆ.

ಮುಖ್ಯಮಂತ್ರಿಯವರಿಂದ ಹೇಳಿಕೆ

ಸರ್ಕಾರಿ ನೌಕರರ ತುಟ್ಟಿಭತ್ಯೆ ಹೆಚ್ಚಳದ ಬಗ್ಗೆ

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಗಳು).—ಮಾನ್ಯ ಸಭಾಧ್ಯಕ್ಷರಿಗೆ ನಾನು ಧನ್ಯವಾದ ಗಳನ್ನು ಅರ್ಪಿಸುತ್ತೇನೆ. ಮಾನ್ಯ ಸದಸ್ಯರು ಇಪತ್ತಿನ ಬೇಡಿಕೆಗಳ ಬಗ್ಗೆ ಮಾತನಾಡುತ್ತಿದ್ದರು. ಮಂಧ್ಯದಲ್ಲೇ ಅಪರ ಭಾಷಣಕ್ಕೆ ತಡೆ ಉಂಟು ಮಾಡಬೇಕಾದ ಪರಿಸ್ಥಿತಿ ಬಂತು. ಆದಕ್ಕೆ ಕಾರಣ ಇಷ್ಟೆ, ನಾನು ಒಂದು ಮಹತ್ವದ ಸ್ಟೇಟ್‌ಮೆಂಟ್‌ನ್ನು ಮಾಡಬೇಕಾಗಿದೆ. ಮತ್ತು ಸನ್ನ ರೋಗ್ಯ ಅಷ್ಟೊಂದು ಸರಿಯಿಲ್ಲದ್ದಕ್ಕಾಗಿ ನಾನು ಸ್ಟೇಟ್‌ಮೆಂಟ್ ಮಾಡಿ ತಿರುಗಿ ಹೋಗಿ ನಾನು ಸಾಕಷ್ಟು ವಿಶ್ರಾಂತಿ ಪಡೆಯಬೇಕಾಗಿದೆ. ಆದಕ್ಕೆ ತಮ್ಮ ಅನುಮತಿಯನ್ನು ಕೇಳಿದ್ದೇನೆ. ಮಾನ್ಯ ಸಭಾಧ್ಯಕ್ಷರೇ ಅವಸರದಲ್ಲಿ ಇಂಗ್ಲೀಷನಲ್ಲಿ ಈ ಸ್ಟೇಟ್‌ಮೆಂಟ್ ತಯಾರಾಗಿದೆ. ಬಹುಶ; ಇನ್ನೂ ಸ್ವಲ್ಪ ಹೊತ್ತಿನಲ್ಲಿ ಇದರ ಎಲ್ಲಾ ಪ್ರತಿಗಳು ಕೂಡ, ಇಂಗ್ಲೀಷ್ ಮತ್ತು ಕನ್ನಡದಲ್ಲಿ ಕೂಡ ಸಾಧ್ಯವಾದರೆ ಇವತ್ತೇ ಎಲ್ಲ ಮಾನ್ಯ ಸದಸ್ಯರುಗಳಿಗೆ ಕಳಿಸುವುದಕ್ಕೆ ಮತ್ತು ಒದಗಿಸುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

Dearness Allowance is an allowance paid to compensate the Government employees for the erosion in the real value of the salaries owing to the increase in prices. This allowance which came to be paid in the wake of the II world was has been continued to be paid for over four decades. The Pay Commissions appointed by the State Government as well as Central Government have recognised the relevance and the need to pay this allowance.

2. Dearness Allowance paid to the Government employees is regulated with reference to the all India Average Consumer Price Index Number, the base year being 1960. It is paid for the price increases above the twelve monthly average twice a year. Government servants drawing basic pay upto Rs. 3,500 per month are allowed 100 percent neutralisation agains the price increase. Those drawing basic pay between Rs. 3,501 to Rs. 6,000 per month are allowed 75 percent neutralisation and those drawing basic pay of Rs. 6,001 and above per month are allowed neutralisation upto 65 percent only.

3. The consumer price index number stood at 842 points at the end of December 1989 moving from 817 points in July 1989. Thus, the index has registered an increase of 25 points between 1-7-1989 to 31-12-89. Accordingly, as per the formula in force, our employees drawing pasic pay upto Rs. 3,500 per month become entitled for an increase of 4 percent in their basic pay. Those drawing a basic pay of Rs. 3,501 to Rs, 6,000 per month become entitled for a D. A. increase of 3 percent and those drawing a basic pay of Rs. 6,001 per month and above for an increase of 2 percent.